ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 137 RNI Number : KNKAN/25/A2770 26-05-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :137 ರಾಯಚೂರು 26-05-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಕರ್ನಾಟಕದ ಶತಾವಧಾನಿ ಆರ್.ಗಣೇಶ್‌ಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಉಪರಾಷ್ಟ್ರಪತಿ ಸಿ ಪಿ ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಇತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ಪದ್ಮಭೂಷಣ ಪ್ರಶಸ್ತಿ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿ ಅಂಕೇ ಗೌಡ ಎಂ., ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಡಾ. ಪ್ರಭಾಕರ ಬಸವಪ್ರಭು ಕೋರೆ, ಶಶಿ ಶೇಖರ್ ವೆಂಪತಿ, ಸಮಾಜ ಸೇವೆ ಕ್ಷೇತ್ರದಲ್ಲಿ ಎಸ್ ಜಿ ಸುಶೀಲಮ್ಮ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಶುಭಾ ವೆಂಕಟೇಶ್ ಅಯ್ಯಂಗಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸುರೇಶ ಹನಗವಾಡಿ, ವ್ಯಾಪಾರ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಟಿ ಟಿ ಜಗನ್ನಾಥನ್ (ಮರಣೋತ್ತರ) ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ ರಾಷ್ಟ್ರಪತಿ ಮುರ್ಮು ಅವರು ಪದ್ಮವಿಭೂಷಣ ಪ್ರದಾನ ಮಾಡಿದರು, ನಟಿ ಹೇಮಾ ಮಾಲಿನಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ಪಿಟೀಲು ವಾದಕ ಎನ್ ರಾಜಮ್ ಅವರಿಗೆ ಪದ್ಮವಿಭೂಷಣ, ಮಾಜಿ ಮಹಾರಾಷ್ಟ್ರ ಗವರ್ನರ್ ಭಗತ್ ಸಿಂಗ್ ಕೋಶ್ಯಾರಿ ಅವರಿಗೆ ಪದ್ಮಭೂಷಣ ಮತ್ತು ಬ್ಯಾಂಕರ್ ಉದಯ್ ಕೋಟಕ್ ಅವರಿಗೆ ಪದ್ಮಭೂಷಣವನ್ನು ರಾಷ್ಟ್ರಪತಿಗಳು ಪ್ರದಾನ ಮಾಡಿದರು. ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪದ್ಮವಿಭೂಷಣ ಪುರಸ್ಕೃತರು:

ಸಂಖ್ಯೆ ಹೆಸರು ಕ್ಷೇತ್ರ ರಾಜ್ಯ

1ಧರ್ಮೇಂದ್ರ ಸಿಂಗ್ ಡಿಯೋಲ್ (ಮರಣೋತ್ತರ) ಕಲೆ ಮಹಾರಾಷ್ಟ್ರ

2ಕೆ.ಟಿ. ಥಾಮಸ್ ಸಾರ್ವಜನಿಕ ವ್ಯವಹಾರಗಳು ಕೇರಳ

3ಎನ್ ರಾಜಮ್ ಕಲೆ ಉತ್ತರ ಪ್ರದೇಶ

4ಪಿ ನಾರಾಯಣನ್‌ಸಾಹಿತ್ಯ ಮತ್ತು ಶಿಕ್ಷ ಕೇರಳ

5ವಿಎಸ್ ಅಚ್ಯುತಾನಂದನ್ (ಮರಣೋತ್ತರ) ಸಾರ್ವಜನಿಕ ವ್ಯವಹಾರಗಳು ಕೇರಳ



ಭಾರತದ ಅತ್ಯುನ್ನತ ನಾಗರಿಕ ಗೌರವಗಳಾದ ಪದ್ಮ ಪ್ರಶಸ್ತಿಗಳನ್ನು ಕಲೆ, ಸಾರ್ವಜನಿಕ ವ್ಯವಹಾರಗಳು, ಸಾಹಿತ್ಯ, ವೈದ್ಯಕೀಯ, ಕ್ರೀಡೆ, ವಿಜ್ಞಾನ ಮತ್ತು ಸಾಮಾಜಿಕ ಕಾರ್ಯದಂತಹ ಕ್ಷೇತ್ರಗಳಲ್ಲಿ ಅಸಾಧಾರಣ ಸೇವೆ ಮತ್ತು ಕೊಡುಗೆಯನ್ನು ಗುರುತಿಸಲು ನೀಡಲಾಗುತ್ತದೆ. ಈ ವರ್ಷ, ಐದು ಪದ್ಮವಿಭೂಷಣ, 13 ಪದ್ಮಭೂಷಣ ಮತ್ತು 113 ಪದ್ಮಶ್ರೀ ಸೇರಿದಂತೆ 131 ಪದ್ಮ ಪ್ರಶಸ್ತಿಗಳನ್ನು ನೀಡಲಾಗಿದೆ.

ಪ್ರಶಸ್ತಿಗಳನ್ನು ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ: ಅಸಾಧಾರಣ ಮತ್ತು ವಿಶಿಷ್ಟ ಸೇವೆಗಾಗಿ ಪದ್ಮವಿಭೂಷಣ, ಉನ್ನತ ಶ್ರೇಣಿಯ ವಿಶಿಷ್ಟ ಸೇವೆಗಾಗಿ ಪದ್ಮಭೂಷಣ ಮತ್ತು ಯಾವುದೇ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಗಾಗಿ ಪದ್ಮಶ್ರೀ ಪ್ರಶಸ್ತಿ ನೀಡಲಾಗುತ್ತದೆ.

ಈ ವರ್ಷದ ಪದ್ಮ ಗೌರವಗಳು ದೇಶದ ದೂರದ ಭಾಗಗಳಿಂದ ಬಂದ ಹಲವಾರು ತಳಮಟ್ಟದ ಕಾರ್ಮಿಕರು ಮತ್ತು ಪ್ರಚಾರಗೊಳ್ಳದ ವೀರರು ಸೇರಿದಂತೆ ಆಯಾ ಕ್ಷೇತ್ರಗಳಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಸಾಮಾನ್ಯ ಭಾರತೀಯರನ್ನು ಗುರುತಿಸುವ ಸಂಪ್ರದಾಯವನ್ನು ಮುಂದುವರೆಸಿವೆ. ಕೇಂದ್ರದ ಪ್ರಕಾರ, ಪಟ್ಟಿಯಲ್ಲಿ 19 ಮಹಿಳಾ ಪ್ರಶಸ್ತಿ ಪುರಸ್ಕೃತರು, ಆರು ಜನ

3 ನೇ ಪುಟಕ್ಕೆ

ಜೋಳ ಖರೀದಿ ಬಾಕಿ 303 ಕೋಟಿ ಬಿಡುಗಡೆಗೆ ರೈತರ ಆಗ್ರಹ

ಆರು ತಿಂಗಳಾದರೂ ಹಣ ಸಿಗದೆ ರೈತರು ಸಂಕಷ್ಟದಲ್ಲಿ : ಸರ್ಕಾರ ವಿರುದ್ಧ ಆಕ್ರೋಶ; ಹೋರಾಟದ ಎಚ್ಚರಿಕೆ



ರಾಯಚೂರು,ಮೇ.25-

ಮುಂಗಾರು ಹಂಗಾಮಿನಲ್ಲಿ ಸರ್ಕಾರ ಖರೀದಿಸಿದ ಜೋಳದ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ರೈತ ಮುಖಂಡ ಅಮೀನಪಾಶ್ ದಿದ್ದಿಗಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟು 8 ಲಕ್ಷ 20 ಸಾವಿರ ಕ್ವಿಂಟಲ್ ಜೋಳವನ್ನು ಖರೀದಿಸಿದ್ದರೂ ಇದುವರೆಗೆ ಕೇವಲ 80 ಸಾವಿರ ಕ್ವಿಂಟಲ್ ಜೋಳದ ಹಣ ಮಾತ್ರ ರೈತರಿಗೆ ಪಾವತಿಸಲಾಗಿದೆ ಎಂದು ಆರೋಪಿಸಿದರು.

ಇನ್ನೂ ?303 ಕೋಟಿ 55 ಲಕ್ಷಕ್ಕೂ ಅಧಿಕ ಹಣ ರೈತರಿಗೆ ಬಾಕಿಯಿದ್ದು, ಜೋಳ ಕಟಾವು ಮಾಡಿ ಆರು ತಿಂಗಳು ಕಳೆದರೂ ಸಂಪೂರ್ಣ ಹಣ ಬಿಡುಗಡೆಯಾಗದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಪ್ರತಿವರ್ಷ ಇದೇ ಸಮಸ್ಯೆ ಮರುಕಳಿಸುತ್ತಿದ್ದು, ಕೃಷಿ ಚಟುವಟಿಕೆಗಳಿಗೆ ಸಾಲ ಮಾಡಿಕೊಂಡಿರುವ ರೈತರು ಸರ್ಕಾರದ ಹಣಕ್ಕಾಗಿ ತಿಂಗಳುಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಕುಟುಂಬ ನಿರ್ವಹಣೆ, ಕೃಷಿ ಕಾರ್ಮಿಕರ ವೇತನ ಹಾಗೂ ಮುಂದಿನ ಬೆಳೆ ಸಿದ್ಧತೆಗೆ ರೈತರು

3 ನೇ ಪುಟಕ್ಕೆ

ಭೂಮನಗುಂಡ ಸಿಡಿಲು ಬಡಿದು ಶೇಂಗಾ ಹೊಟ್ಟು, ಬಣವೆಗಳು ಭಸ್ಮ : ಶಾಸಕಿ ಕರೆಮ್ಮ ಜಿ.ನಾಯಕ ಭೇಟಿ



ಅರಕೇರಾ

ಅರಕೇರಾ ತಾಲೂಕಿನ ಭೂಮನಗುಂಡ ಗ್ರಾಮದ ಹೋರವಲಯದಲ್ಲಿನ ತಾಯಮ್ಮ ದೊಡ್ಡಿ(ಕುರ್ಲೆರದೊಡ್ಡಿ)ಯಲ್ಲಿ ಹೊಲದಲ್ಲಿದ್ದ ಮೇವಿನ ಬಣವೆಗೆ ಶನಿವಾರ ರಾತ್ರಿ ಸಿಡಿಲು ಬಡಿದು ಮೇವಿನ ಬಣವೆಗಳಿಗೆ ಬೆಂಕಿ ಬಿದ್ದು 5 ಬಣವೆಗಳು ಬೆಂಕಿಗೆ ಆಹುತಿಯಾಗಿರುವ ಘಟನೆ ಜರುಗಿದೆ.

ಸುದ್ದಿ ತಿಳಿದ ದೇವದುರ್ಗ ವಿಧಾನ ಸಭಾ ಕ್ಷೇತ್ರದ ಶಾಸಕಿ ಕರೆಮ್ಮ ಜಿ.ನಾಯಕ ಅವರು ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಹಾನಿಯಾದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಜಾನುವಾರುಗಳಿಗೆ ಸಂಗ್ರಹಿಸಿದ ಭತ್ತದ ಮೇವು,ಶೇಂಗಾ ಹೊಟ್ಟು,ಹಾಗೂ ಜೋಳದ ಸೊಪ್ಪೆಯ ಬಣವೆಗಳು ಸುಟ್ಟು ಭಸ್ಮವಾಗಿವೆ.

ಐದಾರು ಲಕ್ಷರೂಪಾಯಿಗಳಷ್ಟು ನಷ್ಟ ಸಂಭವಿಸಿದೆ ಎಂದು ಹತಾಶೆಗೊಂಡ ರೈತರು ಶಾಸಕರ ಮುಂದೆ ತಮ್ಮ ಆಳಲನ್ನು ತೊಡಿಕೊಂಡರು. ನೊಂದ ರೈತರಿಗೆ ಶಾಸಕರು ವೈಯಕ್ತಿಕವಾಗಿ 25 ಸಾವಿರ

3 ನೇ ಪುಟಕ್ಕೆ

ಮಳೆ, ಗಾಳಿಗೆ ಮರಗಳು ಧರೆಗುರುಳಿವೆ

ಸಿರವಾರ, ಮೇ.25-

ತಾಲೂಕಿನಲ್ಲಿ ಶನಿವಾರ ರಾತ್ರಿಯಿಡಿ ಭಾರಿ ಗಾಳಿ ಮಿಂಚು, ಗುಡುಗ ಸಂಹಿರ ಮಳೆಯಾಗಿದ್ದು ಎಲ್ಲೆಂದರಲ್ಲಿ ವಿದ್ಯುತ್ ಕಂಬಗಳು ಹಾಗೂ ಗಿಡ ಮರಗಳು ಧರೆಗುರುಳಿದ ಕಾರಣ ಜನ ಜೀವನ ಅಸ್ತವ್ಯಸ್ಥವಾಗಿದೆ.

ಪಟ್ಟಣದ ವಿವಿಧೆಡೆ ಗಿಡಗಳು ನೆಲಕ್ಕಚ್ಚಿವೆ. ಅದರಲ್ಲು ಸಿರವಾರ ಪಟ್ಟಣದ ಮುಖ್ಯ ರಸ್ತೆಗೆ ಹಾಕಲಾಗಿದ್ದ ಗಿಡಗಳು ಈಗ ದೊಡ್ಡದಾಗಿದ್ದು ಅವುಗಳು ಕೂಡ ನೆಲಕ್ಕೆ ಬಿದ್ದಿವೆ.

ಭಾರಿ ಮರ ನೆಲಕ್ಕೆ : ಸಿರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇದ್ದ ಭಾರಿ ಗಾತ್ರದ ಮರವೊಂದು ನೆಲಕ್ಕೆ ಬಿದ್ದಿದ್ದು ಇಡಿ 2. ರಾತ್ರಿಯಿಡಿ ಸುರಿದ ಗಾಳಿ ಮಳೆಗೆ ಧರೆಗುರುಳಿದ ಗಿಡ-ವಿದ್ಯುತ್ ಕಂಬಗಳು

ಪ್ರವಾಸಿ ಮಂದಿರದ ಆವರಣದ ತುಂಬೆಲ್ಲ ನೆರಳಾಗಿದ್ದು ಮರ ಈಗ ನೆಲಕ್ಕೆ ಬಿದ್ದಿದೆ, ಮರ ನೆಲಕ್ಕೆ ಬಿದ್ದಿರುವುದರಿಂದ ಪಕ್ಕದಲ್ಲೆ ಇದ್ದ ತೋಟಗಾರಿಕೆ ಇಲಾಖೆಯ ಕಾಂಪೌಂಡ್ ಗೆ ಹಾನಿಯಾಗಿದೆ ಹಾಗೂ ಮರ ನೆಲಕ್ಕೆ ಬಿದ್ದಿರುವುದಿಂದ ವಿದ್ಯುತ್ ಕಂಬವೊಂದು ಮುರಿದಿದೆ ಮತ್ತು ವಿದ್ಯುತ್ ತಂತಿಗಳು ಒಂದಕ್ಕೊಂದು ಅಂಟಿಕೊಂಡಿದ್ದು ಸಿರವಾರ ಪಟ್ಟಣದಲ್ಲಿ ವಿದ್ಯುತ್ ಸಮಸ್ಯೆ ಎದುರಾಗಿದೆ.

ವಿದ್ಯುತ್ ಕಂಬಗಳು ನೆಲಕ್ಕೆ ತಪ್ಪಿದ ಭಾರಿ ಅನಾಹುತ : ಪಟ್ಟಣದಲ್ಲಿ ಭಾರಿ ಗಾಳಿ ಜೊತೆಗೆ ರಾತ್ರಿಯಿಡಿ ಸುರಿದ ಮಳೆಗೆ ವಿವಿಧೆಡೆ ವಿದ್ಯುತ್ ಕಂಬಗಳು ನೆಲಕ್ಕೆ ಬಿದ್ದಿವೆ, ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಮಳೆ ಬರುವ ಮುಂಚಿತವಾಗಿಯೆ ಅಂದರೆ ಶನಿವಾರ ರಾತ್ರಿ 7.30ಕ್ಕೆ ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದಾರೆ ಇದರಿಂದ ಭಾರಿ ಅನಾಹುತ ತಪ್ಪಿದೆ, ಪಟ್ಟಣದ ವಾರ್ಡ್ ನಂ: 11ರ ಮುಚ್ಚಳಗುಡ್ಡ ಕ್ಯಾಂಪಿನಲ್ಲಿ ಭಾರಿ ಮರವೊಂದು ಬಿದ್ದಿರುವ ಕಾರಣ 4 ಕಂಬಗಳು ನೆಲಕ್ಕೆ ಬಿದ್ದಿವೆ, ಒಂದು ಕಂಬ ಮನೆಯ ಮುಂದೆ ನಿಂತಿದ್ದ ಟ್ರ್ಯಾಕ್ಟರ ಮುಂದೆ ಬಿದ್ದಿದ್ದು ಟ್ರ್ಯಾಕ್ಟರ ಜಖಂಗೊಂಡಿದೆ, ಕಂಬ ಬಿದ್ದಿದ್ದು ಮನೆಯ ಮುಂದೆ ದನ ಕರುಗಳಿಗೆ ಹಾಕಿದ್ದ ಹುಲ್ಲಿನ ಬಣವೆ ಪಕ್ಕದಲ್ಲಿ ಬಿದ್ದಿದೆ ವಿದ್ಯುತ್ ಇಲ್ಲದ ಕಾರಣ ಭಾರಿ ಅನಾಹುತ ತಪ್ಪಿದೆ.

ಕೆಸರು ಗದ್ದೆಯಾದ ರಸ್ತೆಗಳುಜನ: ರಾತ್ರಿಯಿಡಿ ಸುರಿದ ಭಾರಿ ಮಳೆಗೆ ಸಿರವಾರ ಪಟ್ಟಣದ ಮುಖ್ಯ ರಸ್ತೆಯಲ್ಲಿ ನೀರು ನಿಂತು ಕರಸರುಊರು ಗದ್ದೆಯಂತಾಗಿವೆ, ಇನ್ನು ಪಟ್ಟಣದ ದೇವದುರ್ಗ ಕ್ರಾಸ್, ಮಾನ್ವಿ ಕ್ರಾಸ್ ಹತ್ತಿರ ತೆಗ್ಗು ದಿನ್ನೆಗಳಲ್ಲಿ ನೀರು ನಿಂತು ಕೆಸರು ಗದ್ದೆಯಂತಾಗಿದೆ, ಇನ್ನು ಪಟ್ಟಣದ ಸಂತೆ ಐಹಮಾರುಕಟ್ಟೆಯಿಂದ ದೇವದುರ್ಗ ಕ್ರಾಸವರೆಗೆ ರಸ್ತೆ ಕಾಮಗಾರಿ ನಡೆಯುತ್ತಿದೆ ಮತ್ತು ಜಲ ಜೀವನ ಮಿಷನ್ ಯೋಜನೆಯ ಪೈಪ್ ಹಾಕಿದ್ದು ಎಲ್ಲಂದರಲ್ಲಿ ತೆಗ್ಗು ದಿನ್ನೆಗಳು ಬಿದ್ದಿವೆ. ರೈತರ ಮುಖದಲ್ಲಿ ಮಂದಹಾಸ, ಕೃಷಿ ಚಟುವಟಿಕೆಗಳು ಚುರುಕು: ರಾತ್ರಿಯಿಡಿ ಸುರಿದ ಭಾರಿ ಮಳೆಗೆ ರೈತರ ಮುಖದಲ್ಲಿ ಮಂದಹಾಸ ಮೂಡಿದೆ, ಭಾರಿ ಬಿಸಿಲಿನಿಂದ ಬೆಂದಿದ್ದ ಜನರಿಗೆ ಹಾಗೂ ರೈತರಿಗೆ ಕೊಂಚ ನಿರಾಳ ನೀಡಿದೆ ಹಾಗೂ ರೈತರು ಕೃಷಿ ಚಟುವಟಿಕೆಗಳನ್ನು ಮಾಡುವತ್ತ ಮುಂದಾಗಿದ್ದಾರೆ. ಸಿರವಾರ ಪಟ್ಟಣದಲ್ಲಿ ಬಿದ್ದಿರುವ ಮರಗಳು ಹಾಗೂ ವಿದ್ಯುತ್ ಕಂಬಗಳನ್ನು ಕೂಡಲೆ ತೆರವುಗೊಳಿಸಿ ಜನರಿಗೆ ಅನುಕೂಲ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿದ್ದಾರೆ.

ಎಸ್ ಐ ಆರ್ ವಿರೋಧಿಸಿ ಮೇ. 30 ರಂದು ಪ್ರತಿರೋಧ ಸಮಾವೇಶ-ಎಂ.ಆರ್.ಭೇರಿ

ದೇವದುರ್ಗ (ಮೇ 25): ದೇಶದಲ್ಲಿ ಮತದಾರರ ಪರಿಷ್ಕೃತ ಪಟ್ಟಿ ಕಾರ್ಯಕ್ರಮದ ಮೂಲಕ ಸಂವಿಧಾನದ ಹಕ್ಕುಗಳ ಚ್ಯುತಿ ಮತ್ತು ನಾಗರಿಕರನ್ನು ಅನಾಥ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ಮೇ 30ರಂದು ರಾಯಚೂರಿನಲ್ಲಿ ಬೃಹತ್ ಪ್ರತಿರೋಧ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಬಹುಜನ ಚಿಂತಕ ಎಂ.ಆರ್.ಭೇರಿ ತಿಳಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಈಗಾಗಲೇ ಪಶ್ಚಿಮ ಬಂಗಾಳ ಸೇರಿದಂತೆ ಸುಮಾರು 13 ರಾಜ್ಯಗಳಲ್ಲಿ ಒತ್ತಾಯದ ಪೂರ್ವಕ ಚುನಾವಣಾ ಆಯೋಗದ ಮೂಲಕ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಮೂಲಕ ಸುಮಾರು 5 ಕೋಟಿ ಮತದಾರರ ಹಕ್ಕುಗಳನ್ನು ಕಿತ್ತುಕೊಂಡಿದೆ. ಬಿಜೆಪಿ ಮತ್ತು ಅಂಗಪಕ್ಷಗಳ ಗೆಲುವಿಗೆ ಅತ್ಯಲ್ಪ ಮತಗಳ ಅವಶ್ಯ ಇದ್ದಲ್ಲಿ ಮಾತ್ರ ಈ ಪ್ರಯೋಗ ಮಾಡಲಾಗಿದೆ. ಹಿಂಬಾಗಿಲಿನಿಂದ ಅಧಿಕಾರ ಪಡೆಯುವ ಕುತಂತ್ರ ಮಾಡಲಾಗಿದೆ ಎಂದು ಆರೋಪಿಸಿದರು.

ಸಂವಿಧಾನದ ಆಶಯಗಳನ್ನು ಅಡಿಪಾಯವನ್ನು ಅಳಿಸಿಹಾಕುವ, ಪ್ರಜಾತಾತ್ರಿಕ ಪ್ರಕ್ರಿಯೆಯನ್ನು ಅಪಹರಣ ಮಾಡುವ ದುಸ್ಸಾಹಸಕ್ಕೆ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ

3 ನೇ ಪುಟಕ್ಕೆ



ಉಟಕನೂರು ಗ್ರಾ.ಪಂ. ಅವ್ಯವಹಾರ ಆರೋಪ : ಪಿಡಿಓ ಜುಬೇರ್ ನಾಯ್ಕ್ ಮೇಲೆ ಕ್ರಮಕ್ಕೆ ಆಗ್ರಹ

ಮಾನ್ವಿ ,ಮೇ.25-

ಉಟಕನೂರು ಗ್ರಾಮ ಪಂಚಾಯಿ ತಿಯಲ್ಲಿ 15ನೇ ಹಣಕಾಸು ಯೋಜನೆಯ ಅನುದಾನ ಬಳಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ಬಸವರಾಜ ಬಾಗಲವಾಡ ಆಗ್ರಹಿಸಿದರು.

ಪಟ್ಟಣದ ಪತ್ರಿಕಾಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಸವರಾಜ ಬಾಗಲವಾಡ ಅವರು, 2025-26ನೇ ಸಾಲಿನ 15ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೇಂದ್ರದ ಅನುದಾನ ರೂ.13,81,000 ಹಾಗೂ ರಾಜ್ಯದ ಅನುದಾನ ರೂ.12,00,000 ಸೇರಿದಂತೆ ಒಟ್ಟು ಅನುದಾನ ಬಿಡುಗಡೆಯಾಗಿತ್ತು. ಅದೇ ರೀತಿ 2026-27ನೇ ಸಾಲಿಗೆ ರೂ.13,55,278 ಅನುದಾನ ಮಂಜೂರಾಗಿದೆ. ಆದರೆ ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಇಲ್ಲದೆ ಅನುದಾನದ ಬಳಕೆ ನಡೆದಿದೆ ಎಂದು ಆರೋಪಿಸಿದರು.

ಗ್ರಾಮ ಪಂಚಾಯಿತಿಯಲ್ಲಿ ಕೈಗೊಂಡ ಕೆಲ ಅಭಿವೃದ್ಧಿ ಕಾಮಗಾರಿಗಳು ಕೇವಲ ದಾಖಲೆಗಳಲ್ಲಿ ಮಾತ್ರ ಕಾಣುತ್ತಿದ್ದು, ಸ್ಥಳ ಪರಿಶೀಲನೆ ನಡೆಸಿದರೆ ನೈಜ ಸ್ಥಿತಿ

3 ನೇ ಪುಟಕ್ಕೆ

371 ಜೆ ದುಂಡು ಮೇಜಿನ ಸಭೆ, ಹೋರಾಟಗಾರರ ಸಮಾವೇಶ

ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ : ಆರ್.ಕೆ.ಹುಡುಗಿ ಕಳವಳ

ರಾಯಚೂರು,ಮೇ.25-

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ವ್ಯವಸ್ಥೆ ತೀವ್ರ ಹದಗೆಟ್ಟಿದ್ದು, ಮಕ್ಕಳ ಭವಿಷ್ಯಕ್ಕೆ ಮಾರಕವಾಗಿದೆ. ಪ್ರಾಥಮಿಕ ಶಿಕ್ಷಣ ಹಾಳು ಮಾಡಿದರೆ ದೇಶವನ್ನೇ ಹಾಳು ಮಾಡಿದಂತಾಗುತ್ತದೆ ಎಂದು ಸಾಮಾಜಿಕ ಚಿಂತಕ ಹಾಗೂ ಹೋರಾಟಗಾರ ಆರ್.ಕೆ.ಹುಡುಗಿ ಕಳವಳ ವ್ಯಕ್ತಪಡಿಸಿದರು.

ನಗರದ ಎಸ್‌ಎಲ್‌ವಿ ಹೋಟೆಲ್‌ನ ಕೊಠಾರಿ ಫಂಕ್ಷನ್ ಹಾಲ್‌ನಲ್ಲಿ ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರ ಆಯೋಜಿಸಿದ್ದ ದುಂಡು ಮೇಜಿನ ಸಭೆ ಮತ್ತು 371(ಜೆ) ಹೋರಾಟಗಾರರ ಸಮಾವೇಶ ಹಾಗೂ ಕಲ್ಯಾಣ ಕರ್ನಾಟಕ ವಿಕಾಸ ವೇದಿಕೆ ಸ್ಥಾಪನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣದ ಗುಣಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಇದು ಸಮಾಜದ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿದೆ. ಒಂದು ದೇಶವನ್ನು ನಾಶ ಮಾಡಲು ಅಣುಬಾಂಬ್ ಅಗತ್ಯವಿಲ್ಲ. ಅಲ್ಲಿನ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಹಾಳಾದರೆ ಸಾಕು ಎಂದು ಅವರು ಅಭಿಪ್ರಾಯಪಟ್ಟರು.



''ಆಳುವ ಸರ್ಕಾರಕ್ಕೆ ಈ ಭಾಗದ ಮಕ್ಕಳ ಬಗ್ಗೆ ಚಿಂತೆಯಿಲ್ಲ. ನಾವು ಇಂದು ಮನುಷ್ಯತ್ವದ ಬರಗಾಲದಲ್ಲಿ ಬದುಕುತ್ತಿದ್ದೇವೆ. ಶಿಕ್ಷಣ, ಸಂಸ್ಕಾರ ಹಾಗೂ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಸಮಾಜವನ್ನು ಎಚ್ಚರಿಸುವ ಅಗತ್ಯವಿದೆ'' ಎಂದು ಹೇಳಿದರು.

371(ಜೆ) ಹೋರಾಟಗಾರ ಡಾ.ರಜಾಕ್ ಉಸ್ತಾದ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಇನ್ನೂ ಹಿಂದುಳಿದಿದೆ ಎಂದು ಹೇಳಿದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ರಚಿಸಿದ್ದ ಪ್ರೊ. ನಂಜುಂಡಪ್ಪ ವರದಿ ಜಾರಿಯಾದರೂ ನಿರೀಕ್ಷಿತ ಮಟ್ಟದ

3 ನೇ ಪುಟಕ್ಕೆ

ಹಾಳಾದ ಬಾಗಲವಾಡ ಮಾನ್ವಿ ರಸ್ತೆ, ಅಪಾಯಕಾರಿ ಹಳ್ಳದ ಸೇತುವೆ :ಲಿಂಗಯ್ಯ ನಾಯಕ್

ಸಿರವಾರ.ಮೇ25-

ತಾಲೂಕಿನ ಬಾಗಲವಾಡ ಗ್ರಾಮದ ಪಕ್ಕದಲ್ಲಿ ಇರುವ ಹಳದ ಸೇತುವೆ ಸಂಪೂರ್ಣವಾಗಿ ಶಿಥಿಲಗೊಂಡಿದ್ದು ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.


ಕವಿತಾಳದಿಂದ ಮಾನ್ವಿ ಸಂಪರ್ಕಿಸುವ ಮುಖ್ಯ ರಸ್ತೆಗೆ ಅಡ್ಡ ನಿರ್ಮಿಸಿರುವ ಹಳ್ಳದ ಸೇತುವೆ ಯಾವುದೇ ಕ್ಷಣದಲ್ಲಾದರೂ ಕುಸಿಯುವ ಭೀತಿ ಎದುರಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಂಡೂ ಕಾಣದಂತೆ ಮೌನ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಶ್ರೀ ಆದಿಕವಿ ವಾಲ್ಮೀಕಿ ಯುವ ಬ್ರಿಗೇಡ್ ಸಂಘದ ರಾಜ್ಯಾಧ್ಯಕ್ಷರಾದ ಲಿಂಗಯ್ಯ ನಾಯಕ ಸೈದಾಪುರ ಆರೋಪಿಸಿದ್ದಾರೆ.



ಸೇತುವೆ ನಿರ್ಮಿಸಿ ಎಷ್ಟೋ ವರ್ಷ ಕಳೆದಿದೆ ಅಂದಿನ ವಾಹನ ದಟ್ಟಣೆಗೆ ಅನುಗುಣವಾಗಿ ನಿರ್ಮಾಣವಾಗಿದ್ದ ಕಿರಿದಾದ ಸೇತುವೆ ಇಂದು ಕವಿತಾಳ ಮತ್ತು ಮಾನ್ವಿ ಭಾಗದ ಪ್ರತಿದಿನ ನೂರಾರು ಲಾರಿ, ಬಸ್, ಟ್ರ್ಯಾಕ್ಟರ್ ದ್ವಿಚಕ್ರ ವಾಹನ ಸೇರಿದಂತೆ ಭಾರಿ ವಾಹನಗಳು ಇದರ ಮೇಲೆಯೇ ಸಂಚರಿಸುತ್ತವುದು ಮಳೆಗಾಲದಲ್ಲಿ

3 ನೇ ಪುಟಕ್ಕೆ

ಸೌಹಾರ್ದತೆಯಿಂದ ಬಕ್ರೀದ್ ಹಬ್ಬ ಆಚರಿಸಿ: ಡಿವೈಎಸ್ಪಿ ಸಂತೋಷ್ ಚವ್ಹಾಣ್



ಹರಪನಹಳ್ಳಿ ,ಮೇ24-

ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಜಾತಿ, ಮತ ಭೇದವಿಲ್ಲದೆ ಪರಸ್ಪರ ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು ಎಂದು ಡಿವೈಎಸ್ಪಿ ಸಂತೋಷ್ ಚವ್ಹಾಣ್ ಹೇಳಿದರು.

ನಗರದ ಪೊಲೀಸ್ ಠಾಣೆ ಆವರಣದಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಸಾರ್ವ ಜನಿಕ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದಲ್ಲಿ ಹಿಂದೂ ಮುಸ್ಲಿಂ ಬಾಂಧವರು ಒಗ್ಗಟ್ಟಾಗಿ ಬದುಕಬೇಕು. ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸದಾ ಸಿದ್ಧವಾಗಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಮನವಿ ಮಾಡಿದರು. ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾ ಗುವುದು. ಸಾಮಾಜಿಕ ಜಾಲತಾಣ ಗಳಲ್ಲಿ ಸುಳ್ಳು ಸುದ್ದಿ ಹರಡುವವರ ಮೇಲೂ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕೆಲವರು ನೈತಿಕ ಪೊಲೀಸ್? ಗಿರಿ ಮಾಡಿ ಕಾನೂನು ಕೈಗೆತ್ತಿಕೊಳ್ಳಬಾರದು. ಯಾವುದೇ ಕಾನೂನು ಉಲ್ಲಂಘನೆ ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಹಬ್ಬದ ದಿನ ಪ್ರಮುಖ ಮಸೀದಿಗಳು, ಈದ್ಗಾ ಮೈದಾನಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು ಎಂದು ತಿಳಿಸಿದರು.

ಸಿಪಿಐ ಮಹಾಂತೇಶ್ ಸಜ್ಜನ್ ಮಾತನಾಡಿ, ಬಕ್ರೀದ್ ಹಬ್ಬವನ್ನು ಸಹೋದರತ್ವ ಮತ್ತು ಸೌಹಾರ್ದತೆಯ ಸಂಕೇತವಾಗಿ ಆಚರಿಸಬೇಕು ಎಂದರು.

ನಗರಸಭೆ ಮಾಜಿ ಸದಸ್ಯ ಅಬ್ದುಲ್ ರೆಹಮನ್ ಮಾತನಾಡಿ, ನಗರದಲ್ಲಿ ಎಲ್ಲ ಧರ್ಮಗಳ ಹಬ್ಬಗಳನ್ನು ಅನ್ಯೋನ್ಯತೆಯಿಂದ ಆಚರಿಸುವ ಪರಂಪರೆ ಮುಂದುವರಿಯಬೇಕು ಎಂದು ಹೇಳಿದರು.

ಸಭೆಯಲ್ಲಿ ಮುಖಂಡರಾದ ಓಂಕಾರ ಗೌಡ, ಖಾಜಾ ಮುಸ್ತಾಕ್ ಸೇರಿದಂತೆ ವಿವಿಧ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಖಾಸಗಿ ಕಂಪನಿ ಉದ್ಯೋಗ ಬಿಟ್ಟು ಸಮಗ್ರ ಕೃಷಿಯಲ್ಲಿ ತೊಡಗಿಸಿಕೊಂಡ ಮೈಸೂರಿನ ಪದವೀಧರೆ: ಲಕ್ಷಾಂತರ ಆದಾಯ ಗಳಿಸುತ್ತಿರುವ ರತ್ನಮ್ಮ







ಮೈಸೂರು, ,ಮೇ24-

ಮಹಿಳೆಯೊಬ್ಬರು ಖಾಸಗಿ ಕಂಪನಿ ಉದ್ಯೋಗ ಬಿಟ್ಟು, ಸಮಗ್ರ ಕೃಷಿಯತ್ತ ಮುಖ ಮಾಡಿ ಯಶಸ್ಸು ಕಂಡಿದ್ದಾರೆ. ಇದೀಗ ಲಕ್ಷ ಲಕ್ಷ ರೂ. ಆದಾಯ ಗಳಿಸುತ್ತ, ವ್ಯವಸಾಯದಿಂದ ದೂರ ಸರಿಯುತ್ತಿರುವ ಇಂದಿನ ಯುವ ಜನತೆಗೆ ಮಾದರಿಯಾಗಿದ್ದಾರೆ.

ತಾಲೂಕಿನ ದೇವಲಾಪುರ ಗ್ರಾಮದಲ್ಲಿ ವಾಸವಾಗಿರುವ ಮಂಜುನಾಥ್ ಅವರ ಪತ್ನಿ ರತ್ನಮ್ಮ ಎಂಬವರು ತಮಗೆ ಸಿಕ್ಕಿದ್ದ ಉದ್ಯೋಗ ಬಿಟ್ಟು, ಕೃಷಿಯನ್ನು ಆಯ್ಕೆಮಾಡಿಕೊಂಡವರು. ಪತಿಯ ಹೆಸರಿನಲ್ಲಿರುವ ಕೇವಲ 1.30 ಗುಂಟೆ ಜಮೀನಿನಲ್ಲಿ ಮೀನು ಹಾಗೂ ಮೊಲ ಸಾಕಾಣಿಕೆಯಲ್ಲಿ ತೊಡಗಿದ್ದಾರೆ. ಈ ಮೂಲಕ ಅನೇಕ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

ಜೊತೆಗೆ, ಮನೆಗೆ ಬೇಕಾದ ಆಹಾರ ಪದಾರ್ಥಗಳಾದ ರಾಗಿ, ಅಲಸಂದೆ, ಹಸಿರುಕಾಳು, ಹುರುಳಿ ಇತರೆ ಕಾಳುಗಳನ್ನು ಬೆಳೆದುಕೊಳ್ಳುತ್ತಾರೆ. ರಾಗಿ ಫಸಲು ಹೆಚ್ಚಾಗುವುದರಿಂದ, ಮನೆಗೆ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು, ಉಳಿದದ್ದನ್ನು ಮಾರಾಟ ಮಾಡುತ್ತಾರೆ. ಅಲ್ಲದೇ, ನಾಲ್ಕು ಹಸುಗಳನ್ನು ಸಾಕಿ, ಹೈನುಗಾರಿಕೆ ಮೂಲಕವೂ ಲಾಭ ಗಳಿಸುತ್ತಿದ್ದಾರೆ.

ಅಲ್ಪ ಜಮೀನಿನಲ್ಲಿಯೇ ಲಾಭ: ಕೆಲವರು ನಾಲ್ಕೈದು ಎಕರೆ ಜಮೀನು ಇಟ್ಟುಕೊಂಡು ಬೆಳೆಯನ್ನೇ ನಂಬಿ ಜೀವನ ನಡೆಸುತ್ತಾರೆ. ಆದರೆ, ರೈತ ಮಹಿಳೆ ರತ್ನಮ್ಮ ಅವರು ತಮಗಿರುವ ಅಲ್ಪ ಜಮೀನಿನಲ್ಲಿಯೇ ಸಮಗ್ರ ಬೆಳೆಯಲ್ಲಿ ತೊಡಗಿಸಿಕೊಂಡು ವಾರ್ಷಿಕವಾಗಿ 2ರಿಂದ 2.50 ಲಕ್ಷ ರೂ. ಲಾಭ ಗಳಿಸುತ್ತಿದ್ದಾರೆ.

ಇನ್ಫೋಸಿಸ್‌ನಲ್ಲಿ ಕೆಲಸ ಮಾಡಿದರೆ, ಕೈ ತುಂಬಾ ಸಂಬಳ ಸಿಗುತ್ತದೆ, ವಾರದ ರಜೆ, ಇತರೆ ರಜೆಗಳು ಸಿಗಲಿದೆ. ಆರಾಮಾಗಿ ಇರಬಹುದು ಎಂದು ಭಾವಿಸಿ ಹಲವರು ಕೆಲಸ ಬಿಡಲು ಹಿಂದೇಟು ಹಾಕುತ್ತಾರೆ. ಆದರೆ ಪದವೀಧರೆಯಾಗಿರುವ ರತ್ನಮ್ಮ, ಇನ್ಫೋಸಿಸ್ ಕೆಲಸಕ್ಕೆ ಗುಡ್ ಬೈ ಹೇಳಿ, 12 ವರ್ಷದಿಂದ ರೈತ ಮಹಿಳೆಯಾಗಿದ್ದಾರೆ. ಇವರ ಕೃಷಿ ಚಟುವಟಿಕೆಯನ್ನು ಗಮನಿಸಿ ತಾಲೂಕು ಕೃಷಿ ಇಲಾಖೆ ಇವರನ್ನು ಸನ್ಮಾನಿಸಿದೆ.

ಈ ಕುರಿತು 'ಈಟಿವಿ ಭಾರತ'ದೊಂದಿಗೆ ಮಾತನಾಡಿದ ರತ್ನಮ್ಮ, '1.30 ಗುಂಟೆ ಜಮೀನಿನಲ್ಲಿ ತೆಂಗು, ಅಡಿಕೆ ಗಿಡಗಳನ್ನು ಸದ್ಯಕ್ಕೆ ಹಾಕಲಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಫಲ ಸಿಗುವ ನಿರೀಕ್ಷೆ ಇದೆ. ರಾಗಿಯೊಂದಿಗೆ ಮನೆಗೆ ಬೇಕಾಗುವ ಅಲಸಂದೆ, ಹುರುಳಿ, ಹಸಿರುಕಾಳುಗಳನ್ನು ಬೆಳೆದುಕೊಳ್ಳುತ್ತಿದ್ದೇವೆ. ಹಸುವಿಗೆ ಬೇಕಾದ ಶುಂಠಿ ಕಡ್ಡಿ ಹುಲ್ಲು, ಜೋಳದ ಹುಲ್ಲನ್ನು ನಮ್ಮ ಹೊಲದಲ್ಲಿಯೇ ಬೆಳೆಯುತ್ತೇವೆ' ಎಂದರು.

'ಮನೆಯಲ್ಲಿ ಸುಮ್ಮನೆ ಕುಳಿತುಕೊಂಡು ಸಮಯ ವ್ಯರ್ಥ ಮಾಡುವುದಕ್ಕಿಂತ ಕೆಲಸದಲ್ಲಿ ತೊಡಗಿಕೊಂಡರೆ, ಮನಸ್ಸು ಸಂತೋಷದಲ್ಲಿ ಇರುವ ಜೊತೆಯಲ್ಲಿ ಆರ್ಥಿಕವಾಗಿ ಸಹಾಯವಾಗಲಿದೆ. ಇನ್ಫೋಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಮದುವೆಯಾಗಿ ಮಕ್ಕಳಾದ ಬಳಿಕ ಕೆಲಸಕ್ಕೆ ರಾಜೀನಾಮೆ ನೀಡಿ, ಕೃಷಿಯ ಜೊತೆಯಲ್ಲಿ ಮೀನು ಸಾಕಾಣಿಕೆ, ಹೈನುಗಾರಿಕೆ, ಮೊಲ ಸಾಕಾಣಿಕೆ ಮಾಡುತ್ತಿದ್ದೇನೆ. ಇದರಿಂದ ಒಳ್ಳೆಯ ಲಾಭ ಬರುತ್ತಿದೆ' ಎಂದು ಹೇಳಿದರು.

ರತ್ನಮ್ಮರ ಪತಿ ಮಂಜುನಾಥ್ ಅವರು ಮಾತನಾಡಿ, 'ನನ್ನ ಪತ್ನಿ 12 ವರ್ಷಗಳಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಮಗ ಹುಟ್ಟಿದ ನಂತರ ಇನ್ಫೋಸಿಸ್ ಕೆಲಸ ಬಿಟ್ಟಿದ್ದಾರೆ. ಬೇರೆ ಕಡೆ ಕೆಲಸ ಮಾಡುತ್ತೇನೆ ಎಂದು ಹೇಳಿದರು. ಆದರೆ, ನಮ್ಮ ಜಮೀನಿನಲ್ಲೇ ಕೃಷಿಯಲ್ಲಿ ತೊಡಗಿಕೊಳ್ಳುವಂತೆ ಸಲಹೆ ನೀಡಿದೆ. ಅದರಂತೆ ಕೃಷಿ ಕೆಲಸದಲ್ಲಿ ತೊಡಗಿದರು. 80 ತೆಂಗು, 300 ಅಡಿಕೆ ಗಿಡಗಳಿವೆ. ನನಗೆ ಕೆಲಸದಲ್ಲಿ ರಜೆ ಸಿಕ್ಕಾಗ ಪತ್ನಿಗೆ ಸಹಾಯ ಮಾಡುತ್ತೇನೆ' ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಿ.ಇ.ಓ.ಗೆ ಬೀಳ್ಕೊಡುಗೆ ಕಾರ್ಯಕ್ರಮ

ಅಭಿವೃದ್ಧಿ ಪರ ಕಾರ್ಯನಿರ್ವಹಿಸಿದ ತೃಪ್ತಿ ಇದೆ : ಭಂವರ್ ಸಿಂಗ್ ಮೀನಾ



ಕಲಬುರಗಿ,

ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ತಂಡದ ರೂಪದಲ್ಲಿ ಕಾರ್ಯನಿರ್ವಹಿಸಿದ ತೃಪ್ತಿ ತಮಗಿದೆ ಎಂದು ನಿರ್ಗಮಿತ ಜಿಲ್ಲಾ ಪಂಚಾಯತ್ ಸಿಇಒ ಭಂವರ್ ಸಿಂಗ್ ಮೀನಾ ಹೇಳಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಚಿಕ್ಕಮಂಗಳೂರು ಜಿಲ್ಲಾಧಿಕಾರಿಯಾಗಿ ಮುಂಬಡ್ತಿ ಪಡೆದು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮೂರು ವರ್ಷಗಳ ಕಾಲ ಗ್ರಾಮೀಣ ಜನರ ಸೇವೆ ಸಲ್ಲಿಸುವ ಅವಕಾಶ ದೊರೆತಿದ್ದು ಸಂತಸ ತಂದಿದೆ. ಕಲಬುರಗಿ ದೊಡ್ಡ ಜಿಲ್ಲೆಯಾಗಿದ್ದು, ಇಲ್ಲಿ ಕಾರ್ಯನಿರ್ವಹಿಸಿದ ಅನುಭವ ಮುಂದಿನ ಸೇವೆಗೆ ಆತ್ಮವಿಶ್ವಾಸ ನೀಡಿದೆ ಎಂದು ಹೇಳಿದರು.

ಜಿಲ್ಲೆಯ ಎಲ್ಲ ಅಧಿಕಾರಿಗಳು ತಂಡದ ರೂಪದಲ್ಲಿ ಕಾರ್ಯನಿರ್ವಹಿಸಿ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದಾರೆ. ಇದೇ ರೀತಿಯ ಸಹಕಾರ ನೂತನ ಸಿಇಒ ಹಾಗೂ ಜಿಲ್ಲಾಧಿಕಾರಿಗಳಿಗೆ ಮುಂದುವರಿಯಬೇಕು ಎಂದು ಮನವಿ ಮಾಡಿದರು.

ಜನರ ಸಮಸ್ಯೆಗಳನ್ನು ಆಲಿಸಿದರೆ ಅರ್ಧ ಕೆಲಸ ಮುಗಿದಂತೆಯೇ ಎಂಬುದನ್ನು ಪಂಚಾಯತ್ ಅಧಿಕಾರಿಗಳು ಮರೆಯಬಾರದು ಎಂದು ಸಲಹೆ ನೀಡಿದರು.

ಆರ್‌ಡಿಪಿಆರ್ ಇಲಾಖೆಯ ಮೂಲಕ ಹಲವು ಜನಪರ ಯೋಜನೆಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರಲು ಪ್ರಯತ್ನಿಸಿದ್ದಾಗಿ ತಿಳಿಸಿದ ಅವರು, ಕೆಲಸದಲ್ಲಿ ನಿರ್ಲಕ್ಷ್ಯ ತೋರಿದ ಕೆಲ ಪಿಡಿಒಗಳ ವಾರ್ಷಿಕ ವೇತನ ಬಡ್ತಿ ತಡೆಹಿಡಿದಿದ್ದೆ. ಬಳಿಕ ಅವರು ಕೆಲಸದಲ್ಲಿ ಸುಧಾರಣೆ ತೋರಿದ್ದರಿಂದ ವರ್ಗಾವಣೆಗೆ ಮುನ್ನವೇ ಅವರ ವೇತನ ಬಡ್ತಿ ಕಡತಗಳಿಗೆ ಸಹಿ ಹಾಕಿರುವುದಾಗಿ ಹೇಳಿದರು.

ಈ ವೇಳೆ ನೂತನ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಸಂಕನೂರ್ ಅವರನ್ನು ಜಿಲ್ಲಾ ಪಂಚಾಯತ್ ಸಿಬ್ಬಂದಿ ಹೂಗುಚ್ಛ ನೀಡಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ ಸೇರಿದಂತೆ ಜಿಲ್ಲಾ ಪಂಚಾಯತಿಯ ಅಧಿಕಾರಿ-ಸಿಬ್ಬಂದಿಗಳು, ಇತರೆ ಇಲಾಖೆಯ ಅಧಿಕಾರಿಗಳು, ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಎಲ್ಲಾ ಇಲಾಖೆಯ ಕೆಲಸಗಳನ್ನು ಕಠಿಣ ಪರಿಶ್ರಮ ಹಾಗೂ ಶ್ರದ್ಧೆಯಿಂದ ಮಾಡಿದ್ದಾರೆ. ಹೀಗಾಗಿ ಭಂವರ್ ಸಿಂಗ್ ಮೀನಾರವರು ಜನಮೆಚ್ಚುಗೆಯನ್ನ ಪಡೆದಿದ್ದಾರೆ. ನನಗೆ ವೈಯಕ್ತಿಕವಾಗಿ ಸಹ ತುಂಬಾ ಆತ್ಮೀಯರು. ಇದೀಗ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಹೋಗ್ತಿದ್ದಾರೆ. ಹೀಗೆ ಅವರ ಜನಪರ ಸೇವೆ ಮುಂದುವರೆಯಲಿ ಎಂದು ಹಾರೈಸುವೆ.

-ಇಕ್ರಮ್ ಶರೀಫ್, ಜಿಲ್ಲಾಧಿಕಾರಿ ಕಲಬುರಗಿ



ಸೊಲಾಪುರ ರೈಲು ನಿಲ್ದಾಣದಲ್ಲಿ ಟಿಟಿಇಗಳಿಗೆ ಅಗ್ನಿ ಸುರಕ್ಷತಾ ತರಬೇತಿ

ಕಲಬುರಗಿ,

ಪ್ರಯಾಣಿಕರ ಸುರಕ್ಷತೆ ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ತಕ್ಷಣ ಸ್ಪಂದಿಸುವ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ಮಧ್ಯ ರೈಲ್ವೆಯ ಸೊಲಾಪುರ ವಿಭಾಗವು ಮೇ 23ರಂದು ಸೊಲಾಪುರ ರೈಲು ನಿಲ್ದಾಣದಲ್ಲಿ ಟಿಟಿಇಗಳಿಗೆ ವಿಶೇಷ ಅಗ್ನಿ ಸುರಕ್ಷತಾ ಹಾಗೂ ತುರ್ತು ಪ್ರತಿಕ್ರಿಯೆ ತರಬೇತಿ ಕಾರ್ಯಕ್ರಮ ಆಯೋಜಿಸಿತು.

ರೈಲುಗಳಲ್ಲಿ ಸಂಭವಿಸಬಹುದಾದ ಅಗ್ನಿ ಅವಘಡಗಳ ವೇಳೆ ಟಿಟಿಇಗಳು ಮೊದಲ ರಕ್ಷಣಾ ಪಡೆ ಹಾಗೂ ಮೊದಲ ಪ್ರತಿಕ್ರಿಯಾಕಾರರಾಗಿ ಕಾರ್ಯನಿರ್ವಹಿಸುವ ಹಿನ್ನೆಲೆಯಲ್ಲಿ ಈ ತರಬೇತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಡ್ರೈ ಕೆಮಿಕಲ್ ಪೌಡರ್ (ಡಿಸಿಪಿ) ಹಾಗೂ ಕಾರ್ಬನ್ ಡೈಆಕ್ಸೈಡ್ () ಅಗ್ನಿಶಾಮಕಗಳ ಬಳಕೆ, ಅವುಗಳ ವರ್ಗೀಕರಣ ಮತ್ತು ಕ್ಲಾಸ್ , , , ಹಾಗೂ ವಿಧದ ಅಗ್ನಿ ಅವಘಡಗಳನ್ನು ನಿಯಂತ್ರಿಸುವ ವಿಧಾನಗಳ ಕುರಿತು ವಿವರಿಸಲಾಯಿತು.

ಅಗ್ನಿಶಾಮಕ ಉಪಕರಣಗಳ ಸುರಕ್ಷಿತ ಬಳಕೆ, ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ಪ್ರಯಾಣಿಕರ ಸ್ಥಳಾಂತರ, ಜನಸ್ತೋಮ ನಿಯಂತ್ರಣ ಹಾಗೂ ಅಗ್ನಿ ಅವಘಡಗಳ ತಕ್ಷಣದ ವರದಿ ಕುರಿತು ಸಿಬ್ಬಂದಿಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು.

ಈ ವೇಳೆ ಸುರಕ್ಷತಾ ವಿಭಾಗವು ಫೈರ್ ಅಂಡ್ ಸ್ಮೋಕ್ ಡಿಟೆಕ್ಷನ್ ಸಿಸ್ಟಮ್ (), ಅಲಾರ್ಮ್ ಚೈನ್ ಪುಲ್ಲಿಂಗ್ () ಹಾಗೂ ಫೇಲ್ಯರ್ ಇಂಡಿಕೇಶನ್ ಕಮ್ ಬ್ರೇಕ್ ಅಪ್ಲಿಕೇಶನ್ () ವ್ಯವಸ್ಥೆಗಳ ಕುರಿತು ವಿಶೇಷ ತರಬೇತಿ ವಿಡಿಯೋ ಪ್ರದರ್ಶಿಸಿತು.

ಸುರಕ್ಷತಾ ಸಲಹೆಗಾರರು ಸಿಬ್ಬಂದಿಯ ಪ್ರಶ್ನೆಗಳಿಗೆ ಉತ್ತರ ನೀಡಿ, ನೈಜ ತುರ್ತು ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗದರ್ಶನ ನೀಡಿದರು.

ಕ್ರೀಡಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಗುರುನಮನ



ಕಲಬುರಗಿ,

ಅಥ್ಲೆಟಿಕ್ಸ್ ಗೆಳೆಯರ ಬಳಗ ಹಾಗೂ ಶಿಷ್ಯವೃಂದದ ವತಿಯಿಂದ ಕ್ರೀಡಾ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಹಿರಿಯ ಗುರುಗಳನ್ನು ಗೌರವಿಸುವ ಉದ್ದೇಶದಿಂದ ''ಗುರುನಮನ'' ಕಾರ್ಯಕ್ರಮವನ್ನು ನಗರದ ಹೊಸ ಜೇವರ್ಗಿ ರಸ್ತೆಯಲ್ಲಿರುವ ಆಮಂತ್ರಣ ನೆಕ್ಸ್ ಹೋಟೆಲ್‌ನಲ್ಲಿ ರವಿವಾರ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ.ಎಂ.ಎಸ್.ದೇವರಮನಿ, ನಿವೃತ್ತ ಹಿರಿಯ ಅಥ್ಲೆಟಿಕ್ಸ್ ತರಬೇತಿದಾರರಾದ ಡಾ.ವಸಂತ ಕುಮಾರ ಹಾಗೂ ನಿವೃತ್ತ ಹಿರಿಯ ವಾಲಿಬಾಲ್ ತರಬೇತಿದಾರರು ಮತ್ತು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಬಂಡೆಪ್ಪ ಗಡ್ಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಶರಣಬಸವೇಶ್ವರ ಪದವಿ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಎಸ್.ಎಂ. ಹೊಳಿ, ''ಕ್ರೀಡಾ ಕ್ಷೇತ್ರದಲ್ಲಿ ಗುರುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರ ಮಾರ್ಗದರ್ಶನ ಮತ್ತು ಶ್ರಮದಿಂದ ಅನೇಕ ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗಿದೆ'' ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಪ್ರತಾಪ್ ಸಿಂಗ್ ತಿವಾರಿ ಅವರು ಗುರು-ಶಿಷ್ಯ ಸಂಬಂಧದ ಮಹತ್ವವನ್ನು ವಿವರಿಸಿ, ವ್ಯಕ್ತಿತ್ವ ನಿರ್ಮಾಣದಲ್ಲಿ ಗುರುಗಳ ಮಾರ್ಗದರ್ಶನ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಎಂ.ಎಸ್. ಪಾಸೋಡಿ, ಉದ್ಯಮಿದಾರ ಹಾಗೂ ಕಲಬುರಗಿ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಮೆಹಬೂಬ್ ಪಟೇಲ್, ಜಿಲ್ಲಾ ಒಲಿಂ ಪಿಕ್ ಅಸೋಸಿಯೇಷನ್ ಉಪಾಧ್ಯಕ್ಷ ಸಿ.ಎಸ್. ಬಾಬಳಗಾಂವ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕ್ರೀಡಾ ಕ್ಷೇತ್ರದ ಗಣ್ಯರು, ತರಬೇತಿದಾರರು, ಹಳೆಯ ಹಾಗೂ ಹಾಲಿ ಕ್ರೀಡಾಪಟುಗಳು ಮತ್ತು ಶಿಷ್ಯರು ಭಾಗವಹಿಸಿ ಗುರುಗಳಿಗೆ ಕೃತಜ್ಞ ನಮನ ಸಲ್ಲಿಸಿದರು.

ಅಥ್ಲೆಟಿಕ್ ತರಬೇತಿದಾರ ನಾಗರಾಜ ಮಾಳಗೆ, ಜಿಲ್ಲಾ ಹ್ಯಾಂಡ್‌ಬಾಲ್ ಅಸೋಸಿಯೇಷನ್‌ನ ದತ್ತಾತ್ರೇಯ ಜೇವರ್ಗಿ, ವಾಸುದೇವ ಕುಲಕರ್ಣಿ, ಚಿನ್ನಮ್ಮ, ದೇವರಾಜ, ಸಂಜು ಕುಮಾರ, ಶೇಖರ ಹಿರೇಸೋಮನೂರ್ ಬಸವರಾಜ ಸಜ್ಜನ್, ವಿನೋದ, ಮನೀಶ ತಿವಾರಿ ಹಾಗೂ ಪ್ರವೀಣ ಪುಣೆ ಸೇರಿದಂತೆ ಹಲವರು ಉಪಸ್ಥಿತರಿದ್ದರು. ರಾಧ ಲೋಕೇಶ್ ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಮಾಳಗೆ ಸ್ವಾಗತ ಕೋರಿದರು. ದತ್ತಾತ್ರೇಯ ಜೇವರ್ಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿದ್ದು ವಂದಿಸಿದರು.

ಕಲಬುರಗಿಯಲ್ಲಿ ವೆಲ್ಫೇರ್ ಪಾರ್ಟಿ ಜಿಲ್ಲಾ ಸಮಾವೇಶ

ಸಾಮಾಜಿಕ ನ್ಯಾಯಕ್ಕಾಗಿ ರಾಜಕೀಯ ಸಬಲೀಕರಣ ಅಗತ್ಯ: ತಾಹೇರ್ ಹುಸೇನ್



ಕಲಬುರಗಿ,

ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ''ಸಾಮಾಜಿಕ ನ್ಯಾಯಕ್ಕಾಗಿ ರಾಜಕೀಯ ಸಬಲೀಕರಣ'' ಎಂಬ ಘೋಷ ವಾಕ್ಯದಡಿ ಜಿಲ್ಲಾ ಸಮಾವೇಶವನ್ನು ರವಿವಾರ ನಗರದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ನಗರದ ಅಂಜುಮನ್ ತರಕ್ಕಿ ಉರ್ದು ಹಾಲ್‌ನಲ್ಲಿ ನಡೆದ ಸಮಾವೇಶದಲ್ಲಿ ಸಾರ್ವಜನಿಕರು, ಯುವ 'ಕರು, ಮಹಿಳೆಯರು, ಸಾಮಾಜಿಕ ಹೋರಾಟಗಾರರು ಹಾಗೂ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯಾಧ್ಯಕ್ಷ ಅಡ್ವೋಕೇಟ್ ತಾಹೇರ್ ಹುಸೇನ್ ವಹಿಸಿದ್ದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅವರು ಸಾಮಾಜಿಕ ನ್ಯಾಯ, ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆ ಹಾಗೂ ಹಿಂದುಳಿದ ಸಮುದಾಯಗಳಿಗೆ ಸಮರ್ಪಕ ರಾಜಕೀಯ ಪ್ರತಿನಿಧಿತ್ವ ದೊರಕಬೇಕಾದ ಅಗತ್ಯವನ್ನು ಒತ್ತಿಹೇಳಿದರು.

ಸಮಾಜದ ಎಲ್ಲ ವರ್ಗಗಳ ಸಬಲೀಕರಣಕ್ಕಾಗಿ ರಾಜಕೀಯ ಜಾಗೃತಿ ಮತ್ತು ಸಂಘಟಿತ ಹೋರಾಟ ಅಗತ್ಯವೆಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿ ಮುಬೀನ್ ಅಹ್ಮದ್, ಸಾಮಾಜಿಕ ಹೋರಾಟಗಾರ ಪ್ರೊ. ಸಂಜಯ್ ಮಾಕಲ್, ಕಲಬುರಗಿ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಲೂಯಿಸ್ ಕೋರಿ, ದೋಸ್ತ್ ಉಪಾಧ್ಯಕ್ಷ ಬಾಬಾ ಹುಂಡೇಕರ್ ಹಾಗೂ ಮಹಿಳಾ ಸಂಚಾಲಕಿ ಶೆಹ್ನಾಜ್ ಅಂಜುಂ ಅವರು ಮಾತನಾಡಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಜನಪರ ರಾಜಕೀಯದ ಅಗತ್ಯತೆಯನ್ನು ವಿವರಿಸಿದರು.

ಜಿಲ್ಲಾ ಅಧ್ಯಕ್ಷ ಸಲೀಂ ಅಹ್ಮದ್ ಚಿತ್ತಾಪುರಿ ಪ್ರಾಸ್ತಾವಿಕವಾಗಿ ಮಾತನಾಡಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಪಕ್ಷದ ಸಂಘಟನೆ ಬಲಪಡಿಸುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಡ್ವೋಕೇಟ್ ಅಬ್ದುಲ್ ಖದೀರ್ ವಂದನಾರ್ಪಣೆ ಸಲ್ಲಿಸಿದರು.

ಈ ವೇಳೆ ಚಿತ್ತಾಪುರ, ಜೇವರ್ಗಿ, ಸೇಡಂ ಹಾಗೂ ಕಲಬುರಗಿ ಗ್ರಾಮೀಣ ಭಾಗಗಳಿಂದ ಹಲವಾರು ಯುವಕರು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾಗೆ ಸೇರ್ಪಡೆಯಾಗಿ ಪಕ್ಷದ ನ್ಯಾಯ, ಸಮಾನತೆ ಮತ್ತು ಸಬಲೀಕರಣದ ಆಶಯಗಳಿಗೆ ಬೆಂಬಲ ವ್ಯಕ್ತಪಡಿಸಿದರು.

ಒಂದನೇಯ ಪುಟದಿಂದ

ಶತಾವಧಾನಿ ಆರ್.ಗಣೇಶ್‌ಗೆ ಪದ್ಮ ಭೂಷಣ ಪ್ರಶಸ್ತಿ ಪ್ರದಾನ

ವಿದೇಶಿಯರು/ಗಳು/ಗಳು/ಗಳು ಮತ್ತು 16 ಮರಣೋತ್ತರ ಪುರಸ್ಕೃತರು ಸೇರಿದ್ದಾರೆ.

ಬುಡಕಟ್ಟು, ಅಂಚಿನಲ್ಲಿರುವ ಮತ್ತು ದೂರದ ಸಮುದಾಯಗಳ ನಡುವೆ ಕೆಲಸ ಮಾಡುವ ವ್ಯಕ್ತಿಗಳು ಸೇರಿದಂತೆ ದೇಶಾದ್ಯಂತದ 45 ಪ್ರಸಿದ್ಧರು ಈ ಗೌರವಕ್ಕೆ ಭಾಜನರಾಗಿದ್ದಾರೆ. ಅವರಲ್ಲಿ ಹಲವರು ತಮ್ಮ ಜೀವನವನ್ನು ಆರೋಗ್ಯ ರಕ್ಷಣೆ, ಶಿಕ್ಷಣ, ಮಹಿಳಾ ಕಲ್ಯಾಣ, ಜೀವನೋಪಾಯ ಉತ್ಪಾದನೆ, ನೈರ್ಮಲ್ಯ ಮತ್ತು ಪರಿಸರ ಸಂರಕ್ಷಣೆಗಾಗಿ ಮುಡಿಪಾಗಿಟ್ಟಿದ್ದಾರೆ.

ಜೋಳ ಖರೀದಿ ಬಾಕಿ 303 ಕೋಟಿ ಬಿಡುಗಡೆಗೆ ರೈತರ ಆಗ್ರಹ

ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ದೂರಿದರು.

ಹಿಂಗಾರು ಜೋಳ ಖರೀದಿ ಪ್ರಕ್ರಿಯೆಯೂ ಆರಂಭವಾಗಿರುವ ಹಿನ್ನೆಲೆಯಲ್ಲಿ ಹೊಸ ಜೋಳ ಈಗಾಗಲೇ ಮಾರುಕಟ್ಟೆಗೆ ನುಗ್ಗುತ್ತಿದ್ದು, ಸರಿಯಾದ ಬೆಲೆ ಸಿಗದೇ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ಸಮಸ್ಯೆಯನ್ನು ನೂತನ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದೆ. ರೈತರ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ವಿಳಂಬ ಮಾಡದೆ ಬಾಕಿ ಹಣವನ್ನು ತಕ್ಷಣ ರೈತರ ಖಾತೆಗಳಿಗೆ ಜಮಾ ಮಾಡಬೇಕು. ಇಲ್ಲವಾದಲ್ಲಿ ರೈತರು ಸಂಘಟಿತ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ನಿಂಗಪ್ಪ, ಬಡೆಸಾಬ್, ಬಸವರಾಜ ಹಾಗೂ ಮಲ್ಲರೆಡ್ಡಿ ಉಪಸ್ಥಿತರಿದ್ದರು.

ಬಣವೆಗಳು ಭಸ್ಮ : ಶಾಸಕಿ ಕರೆಮ್ಮ ಜಿ.ನಾಯಕ ಭೇಟಿ

ರೂಪಾಯಿ ನಗದು ಹಣ ನೀಡಿ ಸಾಂತ್ವನ ಹೇಳೀದರು. ಸರಕಾರದಿಂದ ಸಿಗುವ ಪರಿಹಾರವನ್ನು ಕೊಡಿಸುವ ಭರವಸೆ ನೀಡಿದರು. ಈ ವೇಳೆ ತಹಶೀಲ್ದಾರ ಅಮರೇಶ ಬಿರಾದಾರ,ತಾಪಂ ಇಒ ಯಮನಪ್ಪ ವಾಲ್ಮೀಕಿ ಸಿಡಿಪಿಒ ಕಟ್ಟೆಪ್ಪ, ಕಂದಾಯ ನೀರಿಕ್ಷಕ ಅನಿಲ್ ಹಾಗೂ ಮುಖಂಡರಾದ ತಿಮ್ಮರಡ್ಡಿ ಚಿಂತಲಕುಂಟ,ಸಿದ್ದಣ್ಣದೊಡಂಬಳಿ, ಹನುಮಯ್ಯನಾಯಕ ಅರಳೆಬಂಡಿ, ಗೋವಿಂದರಾಜನಾಯಕ ಚಿಕ್ಕಗುಡ್ಡ,ಚನ್ನಪ್ಪಗೌಡ,ಕುಪ್ಪಯ್ಯ ಆಲ್ಕೋಡ,ಉಮೇಶಗೌಡ,ಆಮಜನೇಯ್ಯ ನಗಡದಿನ್ನಿ,ವೆಂಕಟೇಶಗೌಡ,ಮಹಾದೇವ ಬಿಚ್ಚಿದ ಅರಕೇರಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸುದ್ದಿ ಪೈಲ್ ಸಂಖ್ಯೆ 25(3) ಭೂಮನಗುಂಡ ಸಿಡಿಲು ಬಡಿದು ಶೇಂಗಾ ಹೊಟ್ಟು ಬಣವೆಗಳು ಭಸ್ಮ : ಶಾಸಕಿ ಕರೆಮ್ಮ ಜಿ.ನಾಯಕ ಬೇಟಿ .ನೊಂದ ರೈತರಿಗೆ ಶಾಸಕರು ವೈಯಕ್ತಿಕವಾಗಿ 25 ಸಾವಿರ ರೂಪಾಯಿ ನಗದು ಹಣ ನೀಡಿ ಸಾಂತ್ವನ ಹೇಳೀದರು.

ಎಸ್ ಐ ಆರ್ ವಿರೋಧಿಸಿ ಮೇ. 30 ರಂದು ಪ್ರತಿರೋಧ ಸಮಾವೇಶ

ಮುಂದಾಗಿದ್ದು ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ದೇಶವಾಸಿಗಳಿಗೆ ಅನಗತ್ಯ 13 ದಾಖಲೆಗಳನ್ನು ಒದಗಿಸಲು ಸೂಚಿಸಿದೆ. ಮತದಾರರ ಹಕ್ಕನ್ನು ಕಸಿದುಕೊಂಡು ಎರಡನೇ ದರ್ಜೆಯ ಪ್ರಜೆಗಳನ್ನಾಗಿಸಲು ಎಸ್‌ಐರ್ಆ ಉದ್ದೇಶಿಸಿದೆ. ಕೇಂದ್ರ ಸರ್ಕಾರ ಸರ್ವಾಧಿಕಾರಿ ಧೋರಣೆಯಿಂದ ಜನಸಮುದಾಯದ ಧನಿ ಅಡಗಿಸಲು ಮುಂದಾಗಿದೆ. ಸರ್ಕಾರದ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ತಪ್ಪಿಸುವ ಸಂಚಾಗಿದೆ ಎಂದು ಅವರು ದೂರಿದರು.

ಕಾರಣ ದಲಿತರು, ಅಲ್ಪಸಂಖ್ಯಾತರು, ಕೃಷಿ-ಕೂಲಿ ಕಾರ್ಮಿಕರು, ಶ್ರಮಿಕರು, ಬಡವರು ಜಾಗೃತಿಗೊಳ್ಳಬೇಕಾಗಿದೆ. ಅಸಂವಿಧಾನಿಕ, ಅವೈಜ್ಞಾನಿಕ, ದೋಷಪೂರಿತ ಮತ್ತು ದುರುದ್ದೇಶಪೂರಿತ ಮತದಾರ ಪಟ್ಟಿಯ ಪರಿಷ್ಕರಣಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಮತ್ತೊಂದು ಹೊಸ ಹೋರಾಟ ಅನಿವಾರ್ಯವಾಗಿದೆ. ಕಾರಣ ಸಾಹಿತಿಗಳು, ಚಿಂತಕರು, ಕಲಾವಿದರು, ಎಲ್ಲಾ ಪ್ರಗತಿಪರ ಹೋರಾಟಗಾರರು, ಜಾತ್ಯಾತೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು, ಎಲ್ಲಾ ಜನವರ್ಗದ ಮತದಾರರು ಪಾಲ್ಗೊಂಡು ರಾಯಚೂರಿನಲ್ಲಿ ಮೇ 30ರಂದು ನಡೆಯುತ್ತಿರುವ ಬೃಹತ್ ಪ್ರತಿರೋಧ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವರಾಜ ರುದ್ರಾಕ್ಷಿ, ಹನುಮಂತಪ್ಪ ಮುನ್ನಾಪುರಿ ವಿಶ್ವನಾಥ್ ಬಲ್ಲಿದವ್ ಮೋಹನ್ ಬಲ್ಲಿದವ್ ರಂಗಪ್ಪ ಗೊಸಲ್ ಪಿರೋಜ್ ಹನುಮಂತ ದೊರೆ ಹನುಮಂತಪ್ಪ ಮಾನ್ಯ ಪುರಿ ಮುಂತಾದವರು ಇದ್ದರು.

ಉಟಕನೂರು ಗ್ರಾ.ಪಂ. ಅವ್ಯವಹಾರ ಆರೋಪ : ಪಿಡಿಓ ಜುಬೇರ್ ನಾಯ್ಕ್ ಮೇಲೆ ಕ್ರಮಕ್ಕೆ ಆಗ್ರಹ

ಬಯಲಾಗುತ್ತದೆ ಎಂದು ಹೇಳಿದರು. ಕುಡಿಯುವ ನೀರು, ರಸ್ತೆ ಹಾಗೂ ಸ್ವಚ್ಛತಾ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡದೇ ಹಣ ದುರ್ಬಳಕೆ ಮಾಡಲಾಗಿದೆ ಎಂಬ ಅನುಮಾನ ವ್ಯಕ್ತವಾಗಿದೆ ಎಂದರು.

ಪಿಡಿಓ ಜುಬೇರ್ ನಾಯ್ಕ್ ಅವರ ಆಡಳಿತ ಅವಧಿಯಲ್ಲಿ ಅನುದಾನ ಬಳಕೆಯ ಸಂಪೂರ್ಣ ಮಾಹಿತಿ ಸಾರ್ವಜನಿಕರಿಗೆ ನೀಡಲಾಗಿಲ್ಲ. ಕಾಮಗಾರಿಗಳ ವೆಚ್ಚ, ಟೆಂಡರ್ ಪ್ರಕ್ರಿಯೆ ಹಾಗೂ ಬಿಲ್ ಪಾವತಿ ವಿವರಗಳನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರೆ ಅದನ್ನು ವಾಪಸ್ ವಸೂಲಿ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶ್ರೀಶೈಲ, ಮಂಜುನಾಥ, ಮರಿಬಸವ, ಮರಿಬಸವ ಮಟ್ಟೂರು , ಭೀಮಪ್ಪ ಸೇರಿದಂತೆ ಇತರರು ಇದ್ದರು.

371 ಜೆ ದುಂಡು ಮೇಜಿನ ಸಭೆ, ಹೋರಾಟಗಾರರ ಸಮಾವೇಶ

ಸುಧಾರಣೆ ಆಗಿಲ್ಲ. 371(ಜೆ) ಜಾರಿಗೆ ಎರಡು ದಶಕಗಳಾದರೂ ತಾರತಮ್ಯ ನಿವಾರಣೆಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

371(ಜೆ) ಪ್ರಮಾಣ ಪತ್ರ ನೀಡುವಲ್ಲಿ ಗೊಂದಲಗಳು ಹೆಚ್ಚುತ್ತಿದ್ದು, ನಕಲಿ ಪ್ರಮಾಣ ಪತ್ರಗಳ ಹಂಚಿಕೆ ಹೆಚ್ಚಾಗಿದೆ. ಇದರಿಂದ ನಿಜವಾದ ಅರ್ಹರಿಗೆ ಅನ್ಯಾಯವಾಗುತ್ತಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಗಂಗಾಧರ ನಾಯಕ, ಪ್ರತಾಪಗೌಡ ಪಾಟೀಲ, ಬಸನಗೌಡ ಬ್ಯಾಗವಾಟ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಶಾಸಕಿ ಕರೆಮ್ಮ ಜಿ. ನಾಯಕ, ಲೆಕ್ಕ ಪತ್ರ ಪರಿಶೋಧಕ ಪನ್ನರಾಜ, ಶಾರದಾ ಹುಲಿನಾಯಕ, 371 (ಜೆ) ಹೋರಾಟಗಾರರ ಸಮಾವೇಶ ಸ್ವಾಗತ ಸಮಿತಿ ಗೌರವ ಅಧ್ಯಕ್ಷ ಹರವಿ ನಾಗನಗೌಡ, ಭಾರದ್ವಾಜ್, ಅಲ್ಲಮಪ್ರಭು ಪಾಟೀಲ ಬೆಟ್ಟದೂರು, ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿ ಪಾಟೀಲ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ನೀಲಾ, ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ಹೋರಾಟಗಾರರಾದ ಕೆ.ಜಿ ವೀರೇಶ,ಚನ್ನಬಸವ ಜಾನೆಕಲ್, ಜಮಾತೆ ಇಸ್ಲಾಂ ಹಿಂದ್ ಮುಖಂಡ ಸಮದ್ ಪಾಶ, ಮಾರೆಪ್ಪ ಹರವಿ ಮತ್ತಿತರರು ಇದ್ದರು.

ನಂಜುಂಡಪ್ಪ ವರದಿ ಅನುದಾನ ದುರ್ಬಳಕೆ: ಉಸ್ತಾದ್ ಆರೋಪ

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಮೀಸಲಾದ ನಂಜುಂಡಪ್ಪ ವರದಿ ಅನುದಾನವನ್ನು ಯದ್ವಾತದ್ವಾ ಖರ್ಚು ಮಾಡಲಾಗಿದೆ ಎಂದು ಡಾ. ರಜಾಕ್ ಉಸ್ತಾದ್ ಆರೋಪಿಸಿದರು. ನೀರಾವರಿ ಅಭಿವೃದ್ಧಿಗೆ ಬಳಸಬೇಕಿದ್ದ ಅನುದಾನವನ್ನು ಕೆಬಿಜೆಎನ್‌ಎಲ್ ಬಾಂಡ್ ಸಾಲ ತೀರಿಸಲು ಬಳಸಲಾಗಿದೆ. ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ ಸೇರಿದಂತೆ ಸಾಮಾನ್ಯ ಯೋಜನೆಗಳಿಗೆ ಸರ್ಕಾರದ ಸಾಮಾನ್ಯ ಅನುದಾನ ಬಳಸಬೇಕಾಗಿದ್ದು, ವಿಶೇಷ ಅನುದಾನ ಬಳಸಬಾರದು ಎಂದು ಹೇಳಿದರು. ಈ ಕುರಿತು ಹಲವಾರು ಬಾರಿ ಪ್ರಶ್ನೆ ಮಾಡಿದರೂ ಯಾವುದೇ ಸರ್ಕಾರ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಹಾಳಾದ ಬಾಗಲವಾಡ ಮಾನ್ವಿ ರಸ್ತೆ,ಅಪಾಯಕಾರಿ ಹಳ್ಳದ ಸೇತುವೆ :ಲಿಂಗಯ್ಯ ನಾಯಕ್

ರಾತ್ರಿ ಸುರಿದ ಗಾಳಿ ಮಳೆಗೆ ಧರೆಗುರುಳಿದ ಭಾತಿ ಗಾತ್ರದ ಮರ. ಗಿಡ-ವಿದ್ಯುತ್ ಕಂಬಗಳು - 24 ವಿದ್ಯುತ್ ಕಡಿತ. ತಾಲೂಕಿನಲ್ಲಿ ಶನಿವಾರ ರಾತ್ರಿಯಿಡಿ ಭಾರಿ ಗಾಳಿ ಮಿಂಚು, ಗುಡುಗ ಸಂಹಿರ ಮಳೆಯಾಗಿದ್ದು ಎಲ್ಲೆಂದರಲ್ಲಿ ವಿದ್ಯುತ್ ಕಂಬಗಳು ಹಾಗೂ ಗಿಡ ಮರಗಳು ಧರೆಗುರುಳಿದ ಕಾರಣ ಜನ ಜೀವನ ಅಸ್ತವ್ಯಸ್ಥವಾಗಿದೆ.

ಪಟ್ಟಣದ ವಿವಿಧೆಡೆ ಗಿಡಗಳು ನೆಲಕ್ಕಚ್ಚಿವೆ. ಅದರಲ್ಲು ಸಿರವಾರ ಪಟ್ಟಣದ ಮುಖ್ಯ ರಸ್ತೆಗೆ ಹಾಕಲಾಗಿದ್ದ ಗಿಡಗಳು ಈಗ ದೊಡ್ಡದಾಗಿದ್ದು ಅವುಗಳು ಕೂಡ ನೆಲಕ್ಕೆ ಬಿದ್ದಿವೆ.

ಭಾರಿ ಮರ ನೆಲಕ್ಕೆ : ಸಿರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇದ್ದ ಭಾರಿ ಗಾತ್ರದ ಮರವೊಂದು ನೆಲಕ್ಕೆ ಬಿದ್ದಿದ್ದು ಇಡಿ 2. ರಾತ್ರಿಯಿಡಿ ಸುರಿದ ಗಾಳಿ ಮಳೆಗೆ ಧರೆಗುರುಳಿದ ಗಿಡ-ವಿದ್ಯುತ್ ಕಂಬಗಳು

ಪ್ರವಾಸಿ ಮಂದಿರದ ಆವರಣದ ತುಂಬೆಲ್ಲ ನೆರಳಾಗಿದ್ದು ಮರ ಈಗ ನೆಲಕ್ಕೆ ಬಿದ್ದಿದೆ, ಮರ ನೆಲಕ್ಕೆ ಬಿದ್ದಿರುವುದರಿಂದ ಪಕ್ಕದಲ್ಲೆ ಇದ್ದ ತೋಟಗಾರಿಕೆ ಇಲಾಖೆಯ ಕಾಂಪೌಂಡ್ ಗೆ ಹಾನಿಯಾಗಿದೆ ಹಾಗೂ ಮರ ನೆಲಕ್ಕೆ ಬಿದ್ದಿರುವುದಿಂದ ವಿದ್ಯುತ್ ಕಂಬವೊಂದು ಮುರಿದಿದೆ ಮತ್ತು ವಿದ್ಯುತ್ ತಂತಿಗಳು ಒಂದಕ್ಕೊಂದು ಅಂಟಿಕೊಂಡಿದ್ದು ಸಿರವಾರ ಪಟ್ಟಣದಲ್ಲಿ ವಿದ್ಯುತ್ ಸಮಸ್ಯೆ ಎದುರಾಗಿದೆ.

ವಿದ್ಯುತ್ ಕಂಬಗಳು ನೆಲಕ್ಕೆ ತಪ್ಪಿದ ಭಾರಿ ಅನಾಹುತ : ಪಟ್ಟಣದಲ್ಲಿ ಭಾರಿ ಗಾಳಿ ಜೊತೆಗೆ ರಾತ್ರಿಯಿಡಿ ಸುರಿದ ಮಳೆಗೆ ವಿವಿಧೆಡೆ ವಿದ್ಯುತ್ ಕಂಬಗಳು ನೆಲಕ್ಕೆ ಬಿದ್ದಿವೆ, ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಮಳೆ ಬರುವ ಮುಂಚಿತವಾಗಿಯೆ ಅಂದರೆ ಶನಿವಾರ ರಾತ್ರಿ 7.30ಕ್ಕೆ ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದಾರೆ ಇದರಿಂದ ಭಾರಿ ಅನಾಹುತ ತಪ್ಪಿದೆ, ಪಟ್ಟಣದ ವಾರ್ಡ್ ನಂ: 11ರ ಮುಚ್ಚಳಗುಡ್ಡ ಕ್ಯಾಂಪಿನಲ್ಲಿ ಭಾರಿ ಮರವೊಂದು ಬಿದ್ದಿರುವ ಕಾರಣ 4 ಕಂಬಗಳು ನೆಲಕ್ಕೆ ಬಿದ್ದಿವೆ, ಒಂದು ಕಂಬ ಮನೆಯ ಮುಂದೆ ನಿಂತಿದ್ದ ಟ್ರ್ಯಾಕ್ಟರ ಮುಂದೆ ಬಿದ್ದಿದ್ದು ಟ್ರ್ಯಾಕ್ಟರ ಜಖಂಗೊಂಡಿದೆ, ಕಂಬ ಬಿದ್ದಿದ್ದು ಮನೆಯ ಮುಂದೆ ದನ ಕರುಗಳಿಗೆ ಹಾಕಿದ್ದ ಹುಲ್ಲಿನ ಬಣವೆ ಪಕ್ಕದಲ್ಲಿ ಬಿದ್ದಿದೆ ವಿದ್ಯುತ್ ಇಲ್ಲದ ಕಾರಣ ಭಾರಿ ಅನಾಹುತ ತಪ್ಪಿದೆ.ಕೆಸರು ಗದ್ದೆಯಾದ ರಸ್ತೆಗಳುಜನ: ರಾತ್ರಿಯಿಡಿ ಸುರಿದ ಭಾರಿ ಮಳೆಗೆ ಸಿರವಾರ ಪಟ್ಟಣದ ಮುಖ್ಯ ರಸ್ತೆಯಲ್ಲಿ ನೀರು ನಿಂತು ಕರಸರುಊಊರು ಗದ್ದೆಯಂತಾಗಿವೆ, ಇನ್ನು ಪಟ್ಟಣದ ದೇವದುರ್ಗ ಕ್ರಾಸ್, ಮಾನ್ವಿ ಕ್ರಾಸ್ ಹತ್ತಿರ ತೆಗ್ಗು ದಿನ್ನೆಗಳಲ್ಲಿ ನೀರು ನಿಂತು ಕೆಸರು ಗದ್ದೆಯಂತಾಗಿದೆ, ಸಿರವಾರ ಪಟ್ಟಣದಲ್ಲಿ ಬಿದ್ದಿರುವ ಮರಗಳು ಹಾಗೂ ವಿದ್ಯುತ್ ಕಂಬಗಳನ್ನು ಕೂಡಲೆ ತೆರವುಗೊಳಿಸಿ ಜನರಿಗೆ ಅನುಕೂಲ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿದ್ದಾರೆ.

ಐಟಿಐ ಓದುತ್ತಲೇ ಬ್ಯಾಟರಿ ಚಾಲಿತ ವಾಹನ ತಯಾರಿಸಿದ ಕಾಫಿನಾಡಿನ ಯುವಕ: 4 ಗಂಟೆ ಚಾರ್ಜ್ ಮಾಡಿದ್ರೆ 45 - 50 ಕಿಮೀ ಮೈಲೇಜ್!



ಚಿಕ್ಕಮಗಳೂರು :

ಸಾಧನೆ ಮಾಡಲು ಮನಸ್ಸಿದ್ದರೆ ವಯಸ್ಸು ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಕಾಫಿನಾಡಿನ ಯುವಕನೊಬ್ಬ ಉದಾಹರಣೆಯಾಗಿದ್ದಾನೆ. ಐಟಿಐನಲ್ಲಿ ಓದುತ್ತಿರುವ ವಿದ್ಯಾರ್ಥಿಯೊಬ್ಬ ತನ್ನದೇ ಆದ ಆಲೋಚನೆ ಹಾಗೂ ತಾಂತ್ರಿಕ ಜ್ಞಾನ ಬಳಸಿ ಸಾಮಾನ್ಯ 100 ವಾಹನವನ್ನು ಬ್ಯಾಟರಿ ಆಧಾರಿತ ಎಲೆಕ್ಟ್ರಿಕ್ ವಾಹನವಾಗಿ ಪರಿವರ್ತಿಸಿ ಗಮನ ಸೆಳೆದಿದ್ದಾರೆ.

ಬಾಲ್ಯದಿಂದಲೇ ಹೊಸದನ್ನು ಸೃಷ್ಟಿಸುವ ತುಡಿತ: ಚಿಕ್ಕಮಗಳೂರು ತಾಲೂಕಿನ ಕುರುವಂಗಿ ಮೂಲದ ಸುನೀಲ್ ಇದೀಗ ತಮ್ಮ ಹೊಸ ಆವಿಷ್ಕಾರದ ಮೂಲಕ ಜನರ ಮೆಚ್ಚುಗೆಗೆ ಪಾತ್ರನಾಗಿದ್ದಾರೆ. ಸದ್ಯ ಚಿಕ್ಕಮಗಳೂರಿನಲ್ಲಿ ಐಟಿಐ ವ್ಯಾಸಂಗ ಮಾಡುತ್ತಿರುವ ಸುನೀಲ್‌ಗೆ ಬಾಲ್ಯದಿಂದಲೇ ಸ್ವಂತವಾಗಿ ಏನಾದರೂ ವಿಭಿನ್ನ ಸಾಧನೆ ಮಾಡಬೇಕೆಂಬ ಆಸೆ ಇತ್ತು. ಇದೇ ಕನಸನ್ನು ನನಸಾಗಿಸಲು ಮುಂದಾದ ಆತ ತನ್ನ ಬಳಿ ಇದ್ದ 100 ವಾಹನವನ್ನು ಸಂಪೂರ್ಣವಾಗಿ ಬಿಡಿಸಿ, ಅದನ್ನು ಎಲೆಕ್ಟ್ರಿಕ್ ವಾಹನವಾಗಿ ರೂಪಾಂತರಿಸಿದ್ದಾನೆ.

ಸದ್ಯ ದೇಶಾದ್ಯಂತ ಎಲೆಕ್ಟ್ರಿಕ್ ವಾಹನಗಳ ಬಳಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯ ನಡುವೆ ಜನರು ಪರಿಸರ ಸ್ನೇಹಿ ವಾಹನಗಳತ್ತ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಯೊಬ್ಬ ಸ್ವತಃ ಬ್ಯಾಟರಿ ವಾಹನ ತಯಾರಿಸಿರುವುದು ವಿಶೇಷವಾಗಿದ್ದು, ಯುವಕರಿಗೆ ಪ್ರೇರಣೆಯಾಗಿದೆ.

ಸುನೀಲ್ ತಯಾರಿಸಿದ ಈ ವಾಹನ ಕೇವಲ 4 ಗಂಟೆಗಳ ಚಾರ್ಜ್‌ಗೆ ಸುಮಾರು 45 ಕಿಲೋಮೀಟರ್ ಮೈಲೇಜ್ ನೀಡುತ್ತದೆ ಎಂಬುದು ಮತ್ತಷ್ಟು ಕುತೂಹಲ ಮೂಡಿಸಿದೆ. ಈ ವಾಹನ ತಯಾರಿಸಲು ಸುಮಾರು 45 ಸಾವಿರ ರೂಪಾಯಿ ವೆಚ್ಚವಾಗಿದ್ದು, ಕೆಲವು ಅಗತ್ಯ ಉಪಕರಣಗಳನ್ನು ದೆಹಲಿಯಿಂದ ತರಿಸಿಕೊಂಡಿದ್ದಾಗಿ ಅವರು ತಿಳಿಸಿದ್ದಾರೆ.

ವಾಹನ ತಯಾರಿಸಿದ್ದು ಹೇಗೆ? ವಾಹನದಲ್ಲಿ 750 ವೋಲ್ಟ್ ಮೋಟಾರ್, 48 ವೋಲ್ಟ್ 30 ಬ್ಯಾಟರಿ ಅಳವಡಿಸಲಾಗಿದ್ದು, 48 ವೋಲ್ಟ್ 10 ಆಮ್ಸ್ ಕಂಟ್ರೋಲರ್ ಜೊತೆಗೆ 1000 ವಾಟ್ ಬ್ಯಾಟರಿ ವ್ಯವಸ್ಥೆ ಬಳಸಲಾಗಿದೆ. ಕಡಿಮೆ ವೆಚ್ಚದಲ್ಲಿ ಉತ್ತಮ ಕಾರ್ಯಕ್ಷಮತೆ ನೀಡುವಂತೆ ವಾಹನವನ್ನು ವಿನ್ಯಾಸಗೊಳಿಸಿರುವುದು ವಿಶೇಷವಾಗಿದೆ.

'ಯೂಟ್ಯೂಬ್‌ನಲ್ಲಿ ತಮಿಳುನಾಡಿನವರು ಈ ರೀತಿಯ ಗಾಡಿ ತಯಾರಿಸಿರುವುದನ್ನು ನೋಡಿದ್ದೆ. ಅವರು ಮಾಡಬಹುದಾದರೆ ನಾವೇಕೆ ಮಾಡಬಾರದು? ಅನ್ನೋ ಯೋಚನೆ ಬಂತು. ಅದೇ ಸ್ಫೂರ್ತಿಯಿಂದ ನಾನು ಕೂಡ ಈ ಬ್ಯಾಟರಿ ಗಾಡಿ ತಯಾರಿಸಿದೆ' ಎಂದು ಸುನೀಲ್ ಹೇಳಿದರು.

ಈ ಕುರಿತು ಈಟಿವಿ ಭಾರತಕ್ಕೆ ಸುನೀಲ್ ಅವರು ಪ್ರತಿಕ್ರಿಯೆ ನೀಡಿದ್ದು, 'ನಾನು ಚಿಕ್ಕಮಗಳೂರಿನ ಐಟಿಐ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ನನಗೆ ಹಿಂದಿನಿಂದಲೂ ಈ ರೀತಿಯ ಒಂದು ಗಾಡಿ ತಯಾರಿಸಬೇಕು ಎಂಬ ಕನಸಿತ್ತು. ಐಟಿಐಗೆ ಬಂದ ನಂತರ ಕನಸು ನನಸು ಮಾಡಿಕೊಂಡೆ. ಈ ಗಾಡಿಯನ್ನು ಈ ರೀತಿಯಾಗಿ ತಯಾರಿಸಲು ನಾನು ಸುಮಾರು ಮೂರು ತಿಂಗಳುಗಳ ಕಾಲ ತೆಗೆದುಕೊಂಡಿದ್ದೇನೆ. ಇದಕ್ಕೆ ಸಹಾಯ ಮಾಡಿದವರು ನನ್ನ ಗುರುಗಳು. ನಾನು ಹೊರಗೆ ವರ್ಕ್ ಶಾಪ್‌ಗೆ ಕಲಿಯಲು ಹೋದಂತಹ ಸಂದರ್ಭದಲ್ಲಿ ಈ ರೀತಿಯ ಆಲೋಚನೆ ಬಂತು' ಎಂದರು.

'ಇದು ಟಿವಿಎಸ್ ಎಕ್ಸೆಲ್ ಗಾಡಿ. ನಾರ್ಮಲ್ ಆಗಿ ಪೆಟ್ರೋಲ್‌ನಲ್ಲಿಯೇ ಈ ಗಾಡಿ ಸಂಚಾರ ಮಾಡುತ್ತದೆ. ಅದನ್ನು ಈಗ ಇವಿ ಬೈಕ್ ಆಗಿ ಕನ್ವರ್ಟ್ ಮಾಡಲಾಗಿದ್ದು, ಇದನ್ನು ಕನ್ವರ್ಟ್ ಮಾಡಲು ಬ್ಯಾಟರಿ ಮೋಟಾರ್ ಹಾಗೂ ಕಂಟ್ರೋಲರ್ ಬಳಸಲಾಗಿದೆ. ಈ ರೀತಿ ಮಾಡಲು ನನಗೆ 40 ರಿಂದ 45 ಸಾವಿರ ರೂಪಾಯಿವರೆಗೂ ಖರ್ಚಾಗಿದೆ. ಈ ಬೈಕ್ ವಾಯುಮಾಲಿನ್ಯವನ್ನು ತಡೆಗಟ್ಟಲಿದೆ' ಎಂದು ಹೇಳಿದರು.

'ಮನೆಯಲ್ಲಿ ನಾಲ್ಕು ಗಂಟೆಗಳ ಕಾಲ ಇದನ್ನು ಚಾರ್ಜ್ ಮಾಡಿದರೆ, ಸುಮಾರು 45 ರಿಂದ 50 ಕಿಲೋಮೀಟರ್‌ವರೆಗೂ ಇದು ಮೈಲೇಜ್ ನೀಡುತ್ತದೆ. ಈ ರೀತಿಯ ಬೈಕ್ ಅನ್ನು ತಯಾರಿಸುವುದನ್ನು ನೋಡಿದ ಜನರು ಇಲ್ಲಿಗೆ ಬಂದು ಈ ಬಗ್ಗೆ ಕೇಳುತ್ತಾರೆ. ಆಗ ಅವರಿಗೆ ನಾನು ಪಟ್ಟ ಶ್ರಮದ ಬಗ್ಗೆ ಹೇಳುತ್ತೇನೆ. ಅವರು ಬಂದು ಕೇಳಿದಾಗ ನನಗೆ ತುಂಬಾ ಖುಷಿಯಾಗುತ್ತದೆ. ಪ್ರತಿದಿನ ನಾನು ಇದೇ ಗಾಡಿಯಲ್ಲಿ ಸಂಚಾರ ಮಾಡುತ್ತಿದ್ದು, ನನ್ನ ಎಲ್ಲಾ ಕೆಲಸ ಕಾರ್ಯಗಳನ್ನು ಇದರಲ್ಲಿಯೇ ಮುಗಿಸಿಕೊಳ್ಳುತ್ತೇನೆ' ಎಂದು ತಿಳಿಸಿದರು.

'ಕಾಲೇಜಿಗೂ ಕೂಡ ಇದೇ ಗಾಡಿಯಲ್ಲಿ ಹೋಗುತ್ತೇನೆ. ಇದಕ್ಕೆ ನನ್ನ ಕಾಲೇಜಿನ ಸ್ನೇಹಿತರು ಹಾಗೂ ಉಪನ್ಯಾಸಕರು ಹೆಚ್ಚಿನ ಬೆಂಬಲ ನೀಡುತ್ತಿದ್ದು, ನಿನ್ನ ಯೋಚನೆ ಇಷ್ಟಕ್ಕೆ ನಿಲ್ಲಿಸಬೇಡ, ಮುಂದೆ ಇನ್ನೂ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡು, ನಾವು ನಿನಗೆ ಪ್ರೋತ್ಸಾಹವನ್ನು ನೀಡುತ್ತೇವೆ ಎಂದು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದಾರೆ. ಈ ಇವಿ ಬೈಕನ್ನು ತಯಾರಿಸಲು ಬೇಕಾದಂತಹ ವಸ್ತುಗಳನ್ನು ನಮ್ಮ ಸರ್ ದೆಹಲಿಯಿಂದ ಆರ್ಡರ್ ಮಾಡಿ ಆನ್ಲೈನ್‌ನಲ್ಲಿ ತರಿಸಿ ಕೊಟ್ಟಿದ್ದಾರೆ' ಎಂದು ಸುನೀಲ್ ವಿವರಿಸಿದರು.

'ಇದಕ್ಕೆ ಬೇಕಾದ ವಸ್ತುಗಳೆಲ್ಲ ನನ್ನ ಕೈ ತಲುಪಲು ಸುಮಾರು ಒಂದು ತಿಂಗಳು ಬೇಕಾಗಿತ್ತು. ಟಿವಿಎಸ್ ಎಕ್ಸೆಲ್ ಗಾಡಿಯ ಎಲ್ಲಾ ಇಂಜಿನ್ ಹಾಗೂ ಇತರೆ ವಸ್ತುಗಳನ್ನು ಬಿಚ್ಚಿ ಅಸೆಂಬಲ್ ಮಾಡಲು ನನಗೆ ಸಾಕಷ್ಟು ಸಮಯ ಬೇಕಾಯಿತು. ಇನ್ನು ಬೇರೆ ಬೇರೆ ಪ್ರಾಜೆಕ್ಟ್‌ಗಳನ್ನು ಮಾಡಬೇಕು ಎಂಬ ನೂರಾರು ಕನಸುಗಳನ್ನು ಕಂಡಿದ್ದೇನೆ. ಅದನ್ನು ಸದ್ಯದಲ್ಲೇ ನಿಮಗೆ ತಿಳಿಸಲಿದ್ದೇನೆ' ಎಂದರು.

ಗ್ರಾಮಸ್ಥರಿಗೆ ಹೆಮ್ಮೆ : ಗ್ರಾಮದ ಮುಖಂಡರಾದ ನಾಗೇಶ್ ಈ ಯುವಕನ ಸಾಧನೆ ಕುರಿತು ಪ್ರತಿಕ್ರಿಯೆ ನೀಡಿದ್ದು, 'ಸುನೀಲ್ ತನ್ನ ಸ್ವಂತ ಬುದ್ಧಿ ಹಾಗೂ ಸ್ವಂತ ಹಣವನ್ನು ಖರ್ಚು ಮಾಡಿ ಹೊಸ ಬೈಕನ್ನು ತಯಾರು ಮಾಡಿದ್ದಾನೆ. ಪ್ರತಿ ನಿತ್ಯವೂ ನಮ್ಮ ಗ್ರಾಮದಲ್ಲಿ ಸಂಚಾರ ಮಾಡುತ್ತಾನೆ. ನೋಡಲು ಒಂದು ರೀತಿಯ ವಿಸ್ಮಯದ ರೀತಿ ಕಾಣುತ್ತದೆ. ಇಂಥವರಿಗೆ ನಾವು ನಿಜಕ್ಕೂ ಪ್ರೋತ್ಸಾಹವನ್ನು ನೀಡಬೇಕು. ಇನ್ನೂ ಅತ್ಯಂತ ಎತ್ತರಕ್ಕೆ ಬೆಳೆಯುವ ಮೆಟ್ಟಿಲುಗಳನ್ನು ನಾವು ನಿರ್ಮಿಸಿಕೊಡಬೇಕು' ಎಂದು ಹೇಳಿದರು.

'ನಾವು ಎಲೆಕ್ಟ್ರಿಕಲ್ ಗಾಡಿ ನೋಡಿದ್ದೇವೆ, ಪೆಟ್ರೋಲ್ ಗಾಡಿ ನೋಡಿದ್ದೇವೆ. ಆದರೆ, ಈ ರೀತಿಯ ಗಾಡಿ ನೋಡಿರಲಿಲ್ಲ. ನಮ್ಮಲ್ಲಿಯೇ ಇರುವ ನಮ್ಮೂರಿನ ಹುಡುಗ ಮಾಡಿರುವ ಸಾಧನೆಗೆ ನನಗೆ ಹೆಮ್ಮೆ ಇದೆ. ಈ ರೀತಿಯ ಸಾಧನೆ ಮಾಡಿರುವುದು ನಮಗೆ ತುಂಬಾ ಖುಷಿ ಕೊಡುತ್ತದೆ. ಇನ್ನೂ ಎತ್ತರಕ್ಕೆ ಈ ಹುಡುಗ ಬೆಳೆಯಲಿ ಎಂದು ನಾನು ಹಾರೈಸುತ್ತೇನೆ' ಎಂದರು.

ಈ ಕುರಿತು ಸ್ಥಳೀಯರಾದ ಪ್ರವೀಣ್ ಅವರು ಪ್ರತಿಕ್ರಿಯೆ ನೀಡಿದ್ದು, 'ಸುನೀಲ್ ಚಿಕ್ಕಮಗಳೂರು ತಾಲೂಕಿನಲ್ಲಿ ಈಗ ವಿಶೇಷ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ವಿಶೇಷ ರೀತಿಯಲ್ಲಿ ಸುದ್ದಿ ಆಗುತ್ತಿದ್ದಾನೆ. ತನ್ನ ಟಿವಿಎಸ್ ಎಕ್ಸೆಲ್ 100 ಬೈಕಿನ ಎಲ್ಲಾ ಇಂಜಿನ್ ಕಳಚಿ ಇದಕ್ಕೆ ಬೇಕಾದ ಮೋಟಾರ್‌ಗಳನ್ನು ಕೂರಿಸಿ, ಚಿಕ್ಕಮಗಳೂರಿನ ಯುವಕ ಅದ್ಭುತ ಸಾಧನೆಯನ್ನು ಮಾಡಿದ್ದಾನೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಏಕಲವ್ಯನ ರೀತಿ ಶ್ರಮಪಟ್ಟು ಐಟಿಐ ವ್ಯಾಸಂಗ ಮಾಡುತ್ತಿರುವ ಈ ಯುವಕನ ನೋಡಿ ಚಿಕ್ಕಮಗಳೂರು ಜನತೆ ಮೆಚ್ಚಿಕೊಳ್ಳುವಂತಾಗಿದೆ. ಈ ಯುವಕನ ಜೀವನ ಉಜ್ವಲವಾಗಿರಲಿ, ಮುಂದಿನ ದಿನಗಳಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಇನ್ನೂ ಹೆಚ್ಚಿನ ಹೆಸರು ತರುವಂತಹ ಕೆಲಸವನ್ನು ಈ ಯುವಕ ಮಾಡಲಿ. ಕೇವಲ ನಾಲ್ಕು ಗಂಟೆ ಚಾರ್ಜ್ ಮಾಡಿ 45 ರಿಂದ 50 ಕಿಲೋಮೀಟರ್ ಮೈಲೇಜ್ ನೀಡುವ ಇವಿ ಬೈಕನ್ನು ಕಂಡುಹಿಡಿದಿರುವ ವಿಚಾರ ಕೇಳಿದರೆ ರೋಮಾಂಚನವಾಗುತ್ತದೆ. ಇಂತಹ ಪ್ರತಿಭೆಯನ್ನು ಜಿಲ್ಲಾಡಳಿತ ಕೂಡಲೇ ಗುರುತಿಸಿ, ಇವನಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಹಾಗೂ ಬೇಕಾದಂತಹ ಸವಲತ್ತುಗಳನ್ನು ಒದಗಿಸಿಕೊಡಬೇಕು. ಈತನನ್ನು ಕರೆಯಿಸಿ ಜಿಲ್ಲಾಡಳಿತ ಗೌರವಿಸಬೇಕು' ಎಂದು ಮನವಿ ಮಾಡಿದರು.

ಪಡಿತರ ಅಕ್ಕಿ ಅಕ್ರಮ ಸಾಗಾಟ; 570 ಚೀಲ ಅಕ್ಕಿ ಸಹಿತ ವಾಹನ ಜಪ್ತಿ, ಚಾಲಕನ ಬಂಧನ



ಚಡಚಣ,ಮೇ.24-

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಮಾಡುತಿದ್ದ ಸಾಗಣೆ ವಾಹನವನ್ನು ರಾಷ್ಟ್ರೀಯ ಹೆದ್ದಾರಿ 52ರ ಹಳಗುಣಕಿ ಕ್ರಾಸ್‌ನಲ್ಲಿ ಸಾರ್ವಜನಿಕರು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಆಹಾರ ಇಲಾಖೆಗೆ ಮಾಹಿತಿ ನೀಡಿದ ತಕ್ಷಣವೇ ಸ್ಥಳಕ್ಕೆ ಆಹಾರ ಇಲಾಖೆ ಅಧಿಕಾರಿ ಸಿದ್ರಾಮೇಶ ಹಲಸಂಗಿ ಭೇಟಿ ನೀಡಿ ವಾಹನ ವಶಕ್ಕೆ ಪಡೆದರು.

ಪಡಿತರ ಅಕ್ರಮ ಸಾಗಣೆ ಚಿತ್ರದುರ್ಗದಿಂದ ಗುಜರಾತ್‌ಗೆ ತೆರಳುತ್ತಿತ್ತು ಎನ್ನಲಾಗಿದೆ. ವಾಹನದಲ್ಲಿದ್ದ 570 ಚೀಲಗಳಲ್ಲಿನ 29,640 ಕೆಜಿ ಅಕ್ಕಿ ಸಮೇತ ವಾಹನವನ್ನು ಜಪ್ತಿ ಮಾಡಿ, ಚಾಲಕನನ್ನು ಬಂಧಿಸಲಾಗಿದೆ. ಈ ಕುರಿತು ದೂರು ದಾಖಲಿಸಿ, ವಾಹನವನ್ನು ಹೊರ್ತಿ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದೆ ಎಂದು ಅಧಿಕಾರಿ ಸಿದ್ರಾಮೇಶ ಹಲಸಂಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮರಕ್ಕೆ ಕಾರು ಢಿಕ್ಕಿ: ಇಬ್ಬರು ಸ್ಥಳದಲ್ಲೇ ಮೃತ್ಯು

ಚಿತ್ತಾಪುರ :

ಮತಕ್ಷೇತ್ರದ ವಚ್ಚಾ ಗ್ರಾಮದ ಸಮೀಪ ಸ್ವಿಫ್ಟ್ ಡಿಜೈರ್ ಕಾರು ಮರಕ್ಕೆ ಢಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ.

ಚಿಂಚೋಳಿಯಿಂದ ಕಲಬುರಗಿ ಕಡೆಗೆ ತೆರಳುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ.

ಮೃತರನ್ನು ಶಿವರಾಜ್ (28) ಹಾಗೂ ಸಚೀನ್ (30) ಎಂದು ಗುರುತಿಸಲಾಗಿದ್ದು, ಶ್ರೀಕಾಂತ ಎಂಬವರು ಕಾರಿನಲ್ಲಿ ಇದ್ದರು ಎಂದು ತಿಳಿದುಬಂದಿದೆ.

ಸುದ್ದಿ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ, ಡಿವೈಎಸ್ಪಿ ಶಂಕರಗೌಡ ಪಾಟೀಲ್, ಸಿಪಿಐ ಜಗದೇವಪ್ಪ ಪಾಳಾ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂಬಂಧ ಮಾಡಬೂಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.



ಬಿರುಗಾಳಿಗೆ ಹಾರಿದ ಬಸ್ ನಿಲ್ದಾಣದ ಮೇಲ್ಛಾವಣಿ : ಮನೆಯ ಕಿಟಕಿ ಜಖಂ

ಕೊಪ್ಪಳ :

ನಿನ್ನೆ ಸಂಜೆ ಬೀಸಿದ ಬಿರುಗಾಳಿಗೆ ಗಂಗಾವತಿ ತಾಲ್ಲೂಕಿನ ಇರಕಲ್ಲಗಡ ಗ್ರಾಮದ ಕೆಕೆಆರ್?ಟಿಸಿ ಬಸ್ ನಿಲ್ದಾಣದ ತಗಡಿನ ಮೇಲ್ಛಾವಣಿ ಹಾರಿ ಹೋಗಿರುವ ಘಟನೆ ನಡೆದಿದೆ.

ಭಾರಿ ಗಾಳಿಯ ಹೊಡೆತಕ್ಕೆ ಮೇಲ್ಛಾವಣಿಯ ತಗಡುಗಳು ಸುಮಾರು 200 ಮೀಟರ್ ದೂರಕ್ಕೆ ಹಾರಿ ಬಿದ್ದಿವೆ. ಬಸ್ ನಿಲ್ದಾಣದ ಕಬ್ಬಿಣದ ಅಂಕಲರ್? ಹನುಮೇಶ ಕುಷ್ಟಗಿ ಅವರ ಮನೆಯ ಮಹಡಿಯ ಕಿಟಕಿ ಮೂಲಕ ತಗಡು ನುಗ್ಗಿ ಗಾಜುಗಳು ಜಖಂಗೊಂಡಿವೆ ಎಂದು ತಿಳಿದುಬಂದಿದೆ.

ಘಟನೆಯಲ್ಲಿ ಯಾವುದೇ ಜೀವಹಾನಿ ಸಂಭವಿಸಿಲ್ಲ. ಆದರೆ ಬಿರುಗಾಳಿಯ ತೀವ್ರತೆಗೆ ಸಾರ್ವಜನಿಕರು ಆತಂಕಗೊಂಡಿದ್ದರು.

ಬಸ್ ನಿಲ್ದಾಣಕ್ಕೆ ಉಂಟಾದ ಹಾನಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ತಕ್ಷಣ ಅಗತ್ಯ ದುರಸ್ತಿ ಕಾರ್ಯ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕಲಬುರಗಿ ಣ ನಿರ್ಗಮಿತ ಜಿಲ್ಲಾ ಪಂಚಾಯತ್ ಸಿಇಓಗೆ ಆರೋಗ್ಯ ಇಲಾಖೆಯಿಂದ ಬೀಳ್ಕೊಡುಗೆ



ಕಲಬುರಗಿ,ಮೇ.24-

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಲಬುರಗಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಸಿಇಓ ನಿರ್ಗಮಿತ ಜಿಲ್ಲಾ ಪಂಚಾಯತ್ ಸಿಇಓ ಭಂವ?ರ್ ಸಿಂಗ್ ಮೀನಾ ಅವರಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ನೇತೃತ್ವದಲ್ಲಿ ಬೀಳ್ಕೊಡುಗೆ ಮಾಡಲಾಯಿತು.

ಬೀಳ್ಕೊಡುಗೆ ಸಮಾರಂಭದಲ್ಲಿ ಜಿಲ್ಲಾ ಅರೋಗ್ಯ ಇಲಾಖೆಯ ಡಿಎಚ್‌ಓ ಡಾ. ಶರಣಬಸಪ್ಪ ಕ್ಯಾತನಾಳ್, ಆರ್ ಸಿಎಚ್ ಅಧಿಕಾರಿ ಡಾ. ಸಿದ್ದು ಪಾಟೀಲ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ರಾಕೇಶ್ ಕಾಂಬಳೆ, ಇತರೆ ಅರೋಗ್ಯ ಅಧಿಕಾರಿಗಳು ಮತ್ತು ಕಚೇರಿ ಸಿಬ್ಬಂದಿಯಿಂದ ಆತ್ಮೀಯ ಸನ್ಮಾನಿಸಿ ಗೌರವಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಐಪಿಎಲ್ 2026 ಕಪ್ ಯಾರಿಗೆ; ಹೇಗಿದೆ ಪ್ಲೇ-ಆಫ್ ತಲುಪಿದ ನಾಲ್ಕು ದಿಗ್ಗಜ ತಂಡಗಳ ಬಲಾಬಲ?



ಟಿ20 ಕ್ರಿಕೆಟ್ ಸ್ವರೂಪವು ಸದಾ ತನ್ನ ಅನಿರೀಕ್ಷಿತ ತಿರುವುಗಳಿಗೆ ಹೆಸರುವಾಸಿಯಾಗಿದೆ. ಲೀಗ್ ಹಂತದ ಸಾಧನೆ ಏನೇ ಇದ್ದರೂ, ನಿರ್ಣಾಯಕ ಪಂದ್ಯದ ದಿನದಂದು ಯಾರು ಅತ್ಯುತ್ತಮ ಪ್ರದರ್ಶನ ನೀಡುತ್ತಾರೋ ಅವರೇ ಅಂತಿಮವಾಗಿ ವಿಜಯಶಾಲಿಗಳಾಗುತ್ತಾರೆ. ಒತ್ತಡವನ್ನು ಸಮರ್ಥವಾಗಿ ಮೆಟ್ಟಿ ನಿಂತು, ಶಿಸ್ತುಬದ್ಧ ಆಟವನ್ನು ಪ್ರದರ್ಶಿಸುವ ತಂಡ ಮಾತ್ರ ಈ ಬಾರಿಯ ಐಪಿಎಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳಲಿದೆ

ಇಂಡಿಯನ್ ಪ್ರೀಮಿಯರ್ ಲೀಗ್ () ಟಿ20 ಕ್ರಿಕೆಟ್ ಟೂರ್ನಿಯು ತನ್ನ ಲೀಗ್ ಹಂತದ ಅತ್ಯಂತ ಸುದೀರ್ಘ ಹಾಗೂ ಜಿದ್ದಾಜಿದ್ದಿನ ರೋಚಕ ಹೋರಾಟದ ಬಳಿಕ ಇದೀಗ ಅಂತಿಮ ಘಟ್ಟವಾದ ಪ್ಲೇ-ಆಫ್ ಹಂತಕ್ಕೆ ಬಂದು ತಲುಪಿದೆ. ಅತ್ಯಂತ ಕಠಿಣ ಪೈಪೋಟಿಯ ನಡುವೆ ತಮ್ಮ ಅದ್ಭುತ ರನ್ ರೇಟ್ ಹಾಗೂ ಸತತ ಗೆಲುವಿನ ಲಯವನ್ನು ಕಾಯ್ದುಕೊಂಡ ನಾಲ್ಕು ಬಲಿಷ್ಠ ತಂಡಗಳು ಮಾತ್ರ ಈ ನಿರ್ಣಾಯಕ ಹಂತವನ್ನು ಪ್ರವೇಶಿಸುವಲ್ಲಿ ಯಶಸ್ವಿಯಾಗಿವೆ. ಕ್ರಿಕೆಟ್ ಅಭಿಮಾನಿಗಳಲ್ಲಿ ತೀವ್ರ ಕುತೂಹಲ ಕೆರಳಿಸಿರುವ ಈ ಹಂತದಲ್ಲಿ, ಪ್ರತಿಯೊಂದು ಪಂದ್ಯವೂ ಅತ್ಯಂತ ಮಹತ್ವದ್ದಾಗಿದ್ದು, ಯಾವುದೇ ಸಣ್ಣ ತಪ್ಪು ಕೂಡ ಟೂರ್ನಿಯಿಂದ ನಿರ್ಗಮಿಸುವಂತೆ ಮಾಡಿ ತಂಡದ ಪ್ರಶಸ್ತಿಯ ಕನಸನ್ನು ಸಂಪೂರ್ಣವಾಗಿ ನುಚ್ಚುನೂರು ಮಾಡುವ ಸಾಧ್ಯತೆಯಿದೆ.

ಅಂಕಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಭದ್ರಪಡಿಸಿಕೊಂಡಿರುವ ಆರ್‌ಸಿಬಿ ಟೂರ್ನಿಯುದ್ದಕ್ಕೂ ಅತ್ಯಂತ ಸ್ಥಿರ ಹಾಗೂ ಬಲಿಷ್ಠ ಪ್ರದರ್ಶನವನ್ನು ನೀಡಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳೆರಡರಲ್ಲೂ ಸಮತೋಲನ ಸಾಧಿಸಿರುವುದು ಈ ತಂಡದ ಅತಿದೊಡ್ಡ ಶಕ್ತಿಯಾಗಿದೆ. ಆರಂಭಿಕ ಆಟಗಾರರು ನೀಡುವ ಭದ್ರ ಬುನಾದಿ ಹಾಗೂ ಡೆತ್ ಓವರ್‌ಗಳಲ್ಲಿ ಬೌಲರ್‌ಗಳು ತೋರುವ ಶಿಸ್ತುಬದ್ಧ ದಾಳಿಯು ಎದುರಾಳಿಗಳನ್ನು ಸಂಪೂರ್ಣವಾಗಿ ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ, ಕ್ವಾಲಿಫೈಯರ್-1ಒಂದು ಪಂದ್ಯದಲ್ಲಿ ಆಡುವ ಕಾರಣ ಫೈನಲ್ ಪ್ರವೇಶಿಸಲು ಎರಡು ಜೀವದಾನದ ಅವಕಾಶಗಳು ಲಭ್ಯವಿರುವುದು ಈ ತಂಡದ ಆಟಗಾರರಿಗೆ ಮಾನಸಿಕವಾಗಿ ದೊಡ್ಡ ಮಟ್ಟದ ಆತ್ಮವಿಶ್ವಾಸವನ್ನು ಮತ್ತು ನೈತಿಕ ಬಲವನ್ನು ಒದಗಿಸಿಕೊಡುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಎರಡನೇ ಸ್ಥಾನ ಪಡೆದು ಪ್ಲೇ-ಆಫ್ ಪ್ರವೇಶಿಸಿರುವ ಗುಜರಾತ್ ಟೈಟಾನ್ಸ್ ಕೂಡ ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲದಂತೆ ಸಮಾನ ಪೈಪೋಟಿಯನ್ನು ನೀಡುತ್ತಾ ಬಂದಿದೆ. ನಾಯಕನ ಚಾಣಾಕ್ಷ ನಿರ್ಧಾರಗಳು, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಜವಾಬ್ದಾರಿಯುತ ಆಟ ಹಾಗೂ ಸ್ಪಿನ್ನರ್‌ಗಳ ಮ್ಯಾಜಿಕ್ ಈ ತಂಡದ ಗೆಲುವಿನಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಅಗ್ರಸ್ಥಾನಿ ತಂಡವನ್ನು ಎದುರಿಸುವ ಇವರು, ಒತ್ತಡವನ್ನು ನಿಭಾಯಿಸಿ ನೇರವಾಗಿ ಫೈನಲ್ ತಲುಪುವ ರಣತಂತ್ರವನ್ನು ಹೆಣೆದಿದ್ದಾರೆ. ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ಈ ತಂಡವು ಅದ್ಭುತ ಸಾಮರ್ಥ್ಯವನ್ನು ಹೊಂದಿದ್ದು, ಫೈನಲ್ ಹಾದಿಯಲ್ಲಿ ಎದುರಾಳಿಗಳಿಗೆ ಕಠಿಣ ಸವಾಲಾಗುವುದರಲ್ಲಿ ಖಂಡಿತವಾಗಿಯೂ ಯಾವುದೇ ಅನುಮಾನವಿಲ್ಲ ಎಂಬುದು ಕ್ರೀಡಾ ಪರಿಣಿತರ ವಿಶ್ಲೇಷಣೆಯಾಗಿದೆ.

ಮೂರನೇ ಸ್ಥಾನವನ್ನು ಅಲಂಕರಿಸಿರುವ ಎಸ್‌ಆರ್‌ಎಚ್ ಪಾಲಿಗೆ ಪ್ಲೇ-ಆಫ್ ಹಂತವು ಅಕ್ಷರಶಃ ಮಾಡು ಇಲ್ಲವೆ ಮಡಿಯ ಅತ್ಯಂತ ಕಠಿಣ ಹೋರಾಟದ ಕಣವಾಗಿದೆ. ಎಲಿಮಿನೇಟರ್ ಪಂದ್ಯದಲ್ಲಿ ಆಡುವ ಇವರಿಗೆ ಸೋತರೆ ಟೂರ್ನಿಯಿಂದ ನೇರವಾಗಿ ಹೊರಬೀಳುವ ಭೀತಿಯಿದೆ. ಈ ತಂಡದಲ್ಲಿ ಸ್ಫೋಟಕ ಬ್ಯಾಟರ್‌ಗಳು ಮತ್ತು ಒಬ್ಬಂಟಿಯಾಗಿ ಪಂದ್ಯದ ಗತಿಯನ್ನೇ ಬದಲಿಸಬಲ್ಲಂತಹ ಪ್ರತಿಭಾವಂತ ಮ್ಯಾಚ್ ವಿನ್ನರ್‌ಗಳಿದ್ದರೂ, ಲೀಗ್ ಹಂತದಲ್ಲಿ ಆಗಾಗ ಕಾಡಿದ ಅಸ್ಥಿರತೆಯು ಚಿಂತೆಗೆ ಕಾರಣವಾಗಿದೆ. ತಮ್ಮ ಎಲ್ಲಾ ನ್ಯೂನತೆಗಳನ್ನು ಮರೆಮಾಚಿ, ಅತ್ಯುತ್ತಮ ಸಂಘಟಿತ ಪ್ರದರ್ಶನವನ್ನು ನೀಡಿದರೆ ಮಾತ್ರ ಈ ತಂಡವು ಮುಂದಿನ ಹಂತವಾದ ಕ್ವಾಲಿಫೈಯರ್-ಎರಡಕ್ಕೆ ಯಶಸ್ವಿಯಾಗಿ ಲಗ್ಗೆ ಇಡಲು ಸಾಧ್ಯವಾಗುತ್ತದೆ.

ಕೊನೆಯ ಕ್ಷಣದವರೆಗೂ ಹೋರಾಡಿ ನಾಲ್ಕನೇ ಸ್ಥಾನವನ್ನು ಗಿಟ್ಟಿಸಿಕೊಂಡಿರುವ ರಾಜಸ್ಥಾನ್ ರಾಯಲ್ಸ್ ತಂಡವು ಅತ್ಯಂತ ಅಪಾಯಕಾರಿಯಾಗಿ ಹೊರಹೊಮ್ಮಬಲ್ಲದು. ಸತತ ಗೆಲುವುಗಳೊಂದಿಗೆ ಅವರಿಗೆ ಒಲಿದಿರುವ ಅದ್ಭುತ ಲಯ ಈ ತಂಡದ ಅತಿದೊಡ್ಡ ಅಸ್ತ್ರವಾಗಿದೆ. ಕಳೆದುಕೊಳ್ಳಲು ಏನೂ ಇಲ್ಲ ಎಂಬ ಕೆಚ್ಚೆದೆಯ ಮನೋಭಾವನೆಯೊಂದಿಗೆ ಕಣಕ್ಕಿಳಿಯುವ ಇವರು, ಎಲಿಮಿನೇಟರ್ ಪಂದ್ಯದಲ್ಲಿ ಮೂರನೇ ಸ್ಥಾನಿ ತಂಡದ ಮೇಲೆ ತೀವ್ರ ಒತ್ತಡ ಹೇರಲಿದ್ದಾರೆ. ಲೀಗ್ ಹಂತದ ಆರಂಭಿಕ ಹಿನ್ನಡೆಯ ನಡುವೆಯೂ ಪುಟಿದೆದ್ದ ರೀತಿ ಈ ತಂಡದ ಅಪ್ರತಿಮ ಹೋರಾಟದ ಮನೋಭಾವವನ್ನು ಎತ್ತಿ ತೋರಿಸುತ್ತದೆ. ಬೌಲಿಂಗ್ ವಿಭಾಗವು ಒಮ್ಮೆ ಲಯ ಕಂಡುಕೊಂಡರೆ, ಈ ತಂಡವನ್ನು ನಿಯಂತ್ರಿಸುವುದು ಎದುರಾಳಿಗಳಿಗೆ ಬಲು ಕಷ್ಟಕರವಾದ ಸವಾಲಾಗಲಿದೆ.

ಪ್ಲೇ-ಆಫ್ ಪಂದ್ಯಗಳ ಫಲಿತಾಂಶವು ಕೇವಲ ಆಟಗಾರರ ಹಿಂದಿನ ಅಂಕಿಅಂಶಗಳ ಆಧಾರದ ಮೇಲೆ ಮಾತ್ರ ಖಚಿತವಾಗಿ ನಿರ್ಧಾರವಾಗುವುದಿಲ್ಲ. ಪಂದ್ಯ ನಡೆಯುವ ಮೈದಾನದ ಪಿಚ್‌ನ ವರ್ತನೆ, ರಾತ್ರಿಯ ಪಂದ್ಯಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ಇಬ್ಬನಿಯ ಪ್ರಭಾವ, ಟಾಸ್ ಗೆಲ್ಲುವ ನಾಯಕನ ತೀರ್ಮಾನ ಹಾಗೂ ಪವರ್-ಪ್ಲೇ ಓವರ್‌ಗಳ ಗರಿಷ್ಠ ಸದ್ಬಳಕೆಯು ಸೋಲು-ಗೆಲುವಿನಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಲಿವೆ ಎಂಬುದನ್ನು ಮರೆಯಬಾರದು. ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ತಂಡದ ನಾಯಕನು ತೆಗೆದುಕೊಳ್ಳುವ ದಿಟ್ಟ ಹಾಗೂ ಸೂಕ್ತ ನಿರ್ಧಾರಗಳು ಹಾಗೂ ಆಟಗಾರರ ನಡುವಿನ ಉತ್ತಮ ಸಂವಹನವು ಈ ಹಂತದಲ್ಲಿ ಗೆಲುವಿನ ದಡ ಸೇರಲು ಅತ್ಯವಶ್ಯಕವಾದ ಅಂಶವಾಗಿರುತ್ತದೆ.

ಟಿ20 ಕ್ರಿಕೆಟ್ ಸ್ವರೂಪವು ಸದಾ ತನ್ನ ಅನಿರೀಕ್ಷಿತ ತಿರುವುಗಳಿಗೆ ಹೆಸರುವಾಸಿಯಾಗಿದೆ. ಲೀಗ್ ಹಂತದ ಸಾಧನೆ ಏನೇ ಇದ್ದರೂ, ನಿರ್ಣಾಯಕ ಪಂದ್ಯದ ದಿನದಂದು ಯಾರು ಅತ್ಯುತ್ತಮ ಪ್ರದರ್ಶನ ನೀಡುತ್ತಾರೋ ಅವರೇ ಅಂತಿಮವಾಗಿ ವಿಜಯಶಾಲಿಗಳಾಗುತ್ತಾರೆ. ಒತ್ತಡವನ್ನು ಸಮರ್ಥವಾಗಿ ಮೆಟ್ಟಿ ನಿಂತು, ಶಿಸ್ತುಬದ್ಧ ಆಟವನ್ನು ಪ್ರದರ್ಶಿಸುವ ತಂಡ ಮಾತ್ರ ಈ ಬಾರಿಯ ಐಪಿಎಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳಲಿದೆ. ಕ್ರಿಕೆಟ್ ಅಭಿಮಾನಿಗಳಿಗೆ ಅತ್ಯುನ್ನತ ಮಟ್ಟದ ರೋಚಕ ಪೈಪೋಟಿ ಹಾಗೂ ರಸದೌತಣ ಕಾದಿರುವುದು ನೂರಕ್ಕೆ ನೂರು ಸತ್ಯವಾಗಿದೆ ಎಂಬುದು ಸ್ಪಷ್ಟ.

ಗ್ರಾಮ ಸ್ವರಾಜ್, ಪಂಚಾಯತ್ ರಾಜ್ ಕಾಯ್ದೆಗೆ ಬಿಡಿಗಾಸಿನ ಬೆಲೆಯನ್ನೂ ಕೊಡದ ಸರ್ಕಾರದ ನಡೆ ಖಂಡನೀಯ

ಅತಿ ಶೀಘ್ರದಲ್ಲಿ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡಬೇಕು. ಒಂದು ವೇಳೆ ವಿಳಂಬವಾದರೆ ಕಾನೂನಾತ್ಮಕ ಹೋರಾಟಕ್ಕೆ ಇಳಿಯಬೇಕಾಗುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಸರ್ಕಾರ ಬಿಡಿಗಾಸಿನ ಬೆಲೆಯನ್ನೂ ಕೊಡದೆ ಸಂವಿಧಾನ ವಿರೋಧಿ ನೀತಿಯ ಹಾದಿ ತುಳಿಯುತ್ತಿರುವುದು ಖಂಡನೀಯ. ಕಾನೂನು, ನೀತಿ-ನಿಯಮಗಳ ಚೌಕಟ್ಟಿಗೆ ನಾವು ಸಂವಿಧಾನ ಎನ್ನುತ್ತೇವೆ. ಆದರೆ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡದೇ ಕಾನೂನು, ನೀತಿ-ನಿಯಮಗಳನ್ನು ಗಾಳಿಗೆ ತೂರಿ ಮನ ಬಂದಂತೆ ವರ್ತಿಸುತ್ತಿರುವ ಸರ್ಕಾರದ ನಡೆ ಎಷ್ಟರಮಟ್ಟಿಗೆ ಸರಿ?

ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಮುಂಬರುವ ದಿನ-ಮಾನಗಳಲ್ಲಿ ಸಾಧಿಸಬೇಕಾದ ಗುರಿಗಳನ್ನು ಸ್ಥಳೀಯ ಜನ ಸಮುದಾಯದೊಂದಿಗೆ ಕಾರ್ಯರೂಪಕ್ಕೆ ತರುವುದೇ ದೂರದೃಷ್ಠಿ ಯೋಜನೆಯಾಗಿದೆ.

ಹಳ್ಳಿ, ಗ್ರಾಮ, ನಗರ ಮತ್ತು ಪಟ್ಟಣಗಳ ಅಭಿವೃದ್ಧಿ ಸ್ಥಳೀಯ ಸರ್ಕಾರದ ಉಪಸ್ಥಿತಿಯಿಂದ ಮಾತ್ರ ಸಾಧ್ಯ. ಸರ್ಕಾರ ಎಂದರೆ ಒಂದು ರೈಲು ಬೋಗಿ ಇದ್ದಂತೆ. ಅದಕ್ಕೆ ಸ್ಥಳೀಯ ಸರ್ಕಾರಗಳು ಎಂಜಿನ್ ಇದ್ದಹಾಗೆ. ಹಾಗೆಯೇ ಬೋಗಿಗಳೆಂದರೆ ವಿಧಾನ ಪರಿಷತ್ತು ಮತ್ತು ವಿಧಾನಸಭೆ ಸದಸ್ಯರುಗಳು. ಆದರೆ ಈಗ ಮರವನ್ನು ಕಡಿಯಲು ಬಳಸುವ ಕೊಡಲಿಯ ಮರದ ಭಾಗವೇ ಆ ಮರಕ್ಕೆ ಮಾರಕ ಎಂಬಂತೆ ಸ್ಥಳೀಯ ಜನ ಪ್ರತಿನಿಧಿಗಳಿಂದ ಆಯ್ಕೆಯಾದ ಶಾಸಕರು ಸ್ಥಳೀಯ ಚುನಾವಣೆಗಳ ಬಗ್ಗೆ ಚಕಾರ ಎತ್ತದೆ ಮೌನಿಗಳಾಗಿರುವುದು ಏಕೆ?

ನೂರಾರು ಹಳ್ಳಿಗಳ ಸಮಸ್ಯೆ ಪರಿಹರಿಸುವುದು ಕೇವಲ ಒಬ್ಬ ಚುನಾಯಿತ ಪ್ರತಿನಿಧಿ ಎಂಎಲ್ಎ ಅಥವಾ ಎಂಎಲ್‌ಸಿಗಳಿಂದ ಅಸಾಧ್ಯ. ಹಾಗೂ ಪಂಚಾಯಿತಿ ಆಡಳಿತಾಧಿಕಾರಿ ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಿಂದ ಹತ್ತಾರು ಹಳ್ಳಿಗಳ ಸಮಸ್ಯೆ ಪರಿಹರಿಸುವುದೂ ಕಷ್ಟಸಾಧ್ಯ.

ಸ್ಥಳೀಯ ಆಡಳಿತ ಮಂಡಳಿ ಇಲ್ಲದೇ ರಾಜ್ಯಾದ್ಯಂತ ಪಂಚಾಯಿತಿಗಳ ಪರಿಸ್ಥಿತಿ ಹೇಗಾಗಿದೆ ಎಂದರೆ, ನಾವಿಕ ಇಲ್ಲದ ಹಡಗು ಎಂಬಂತಾಗಿವೆ. ಇದನ್ನರಿತು ಇತ್ತೀಚಿಗೆ ಆಡಳಿತಾರೂಢ ಪಕ್ಷದ ಪ್ರಭಾವಿ ಮಂತ್ರಿಯವರು ಕಾರ್ಯಕರ್ತರಿಂದ ಸರ್ಕಾರ, ಕಾರ್ಯಕರ್ತರಿಂದ ಅಧಿಕಾರ ಬಂದಿದೆ ಎನ್ನುತ್ತಾರೆ. ಅಂತೆಯೇ ಇನ್ನು ವಿಳಂಬ ಮಾಡದೆ ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು.

ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅತಿ ಶೀಘ್ರದಲ್ಲಿ ಸ್ಥಳೀಯ ಸರ್ಕಾರಗಳ ಚುನಾವಣೆ ಘೋಷಣೆ ಮಾಡಬೇಕು. ಒಂದು ವೇಳೆ ವಿಳಂಬವಾದರೆ ಕಾನೂನಾತ್ಮಕ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಈ ಮೂಲಕ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಮಹಾ ಒಕ್ಕೂಟದ ಪರವಾಗಿ ಎಚ್ಚರಿಸುತ್ತಿದ್ದೇನೆ.

ಯುಎಪಿಎ ಶಾಸನ: ಕತ್ತಲೆಗೆ ನೂರಾರು ತಲೆ

ಕಳೆದ ಹನ್ನೆರೆಡು ವರ್ಷಗಳಲ್ಲಿ ಸಿಬಿಐ, ಆರ್‌ಟಿಐ, ಇಡಿ, ಆದಾಯ ತೆರಿಗೆ ಇಲಾಖೆ ಮುಂತಾದ ಸಾರ್ವಜನಿಕ ಸಂಸ್ಥೆಗಳ ಜೊತೆಗೆ ಯುಎಪಿಎ ಎನ್ನುವ ಶಾಸನದ ಮೂಲಕ ಮೋದಿ ಮತ್ತು ಶಾ ತಮ್ಮ ಫ್ಯಾಸಿಸಂ ಆಡಳಿತವನ್ನು ಜಾರಿಗೊಳಿಸಿದ್ದಾರೆ. ಯುಎಪಿಎ ಶಾಸನವು ಮೋದಿ ನೇತೃತ್ವದ ಸರ್ಕಾರವು ತನ್ನ ರಾಜಕೀಯ, ಸೈದ್ಧಾಂತಿಕ ವಿರೋಧಿಗಳ ಶಕ್ತಿಯನ್ನು ಕುಂಠಿತಗೊಳಿಸಲು ಬಳಸಿಕೊಂಡ ಪ್ರಮುಖ ಅಸ್ತ್ರವಾಗಿದೆ. ಕಾಲಕ್ರಮೇಣ ಇದು ನಿಜವಾದ ಭಯೋತ್ಪಾದಕರ ವಿರುದ್ಧದ ಕಾನೂನಾಗಿರದೆ ಯಾವುದೇ ಭಿನ್ನಮತೀಯ ಧ್ವನಿಯನ್ನು ಭಯೋತ್ಪಾದಕರು ವರ್ಗಕ್ಕೆ ಸೇರಿಸುವ ಮಟ್ಟಕ್ಕೆ ವಿಸ್ತರಿಸಿದೆ.

ಪ್ರೊ. ಪ್ರದೀಪ್ ಚಿಬ್ಬರ್ ಮತ್ತು ಪ್ರೊ. ನಸೀಮುಲ್ಲ ಅವರು ನಿರಂಕುಶ ಪ್ರಭುತ್ವದ ಕುರಿತು ''ಫಿಲಿಫೈನ್ಸ್ ನ ರೋಡ್ರಿಗೋ ಡುಟೆರ್ಟೆ, ಟರ್ಕಿಯ ಎರ್ಡೋಗನ್, ಹಂಗರಿಯ ವಿಕ್ಟೋರ್ ಒರ್ಬನ್, ಯುಎಸ್‌ಎನ ಟ್ರಂಪ್, ಭಾರತದ ಮೋದಿಯಂತಹ ಬಲಪಂಥೀಯ ನಾಯಕರು ಜನಪ್ರಿಯತೆ ಮತ್ತು ತಮ್ಮ ವ್ಯಕ್ತಿತ್ವದ ಮೂಲಕ ಚುನಾವಣೆಯನ್ನ ಗೆಲ್ಲುತ್ತಿದ್ದಾರೆ. ಒಂದು ಕಾಲದಲ್ಲಿ ತಮ್ಮದು ಎಂತಹ ಅಸಾಧಾರಣ ದೇಶವಾಗಿತ್ತು ಎನ್ನುವ ಕಥನವನ್ನ ಮುಂದಿಡುವ ಈ ಆತಂಕಗೊಳಿಸುವ ಜನಪ್ರಿಯ ನಾಯಕರು'( ) ತಮ್ಮ ವಾಕ್ಚಾತುರ್ಯದ ಮೂಲಕ ಭೀತಿ ಮತ್ತು ಹಾನಿಗೆ ಒತ್ತು ಕೊಡುತ್ತಾರೆ. ಅಲ್ಪಸಂಖ್ಯಾತರು, ವಲಸೆಗಾರರು ಮತ್ತು ಇಲ್ಲಿನ ಮೂಲ ನಿವಾಸಿಗಳು ಇವರೆಲ್ಲರಿಂದ ತಮ್ಮ ದೇಶದ ಹಿಂದಿನ ಹೆಗ್ಗಳಿಕೆಗೆ ಭಂಗ ಬಂದಿದೆ ಎಂದು ಭೀತಿ ಹುಟ್ಟಿಸುತ್ತಾರೆ. ಟ್ರಂಪ್ ಮತ್ತು ಒರ್ಬನ್‌ರಂತವರು ತಮ್ಮ ದೇಶದ ಗಡಿಗಳನ್ನ ಮುಕ್ತಗೊಳಿಸಿದರೆ ದೇಶವು ಅಪಾರವಾದ ಹಾನಿಗೆ ಒಳಗಾಗಬೇಕಾಗುತ್ತದೆ, ಸಾಂಪ್ರದಾಯಿಕ ಸಂಸ್ಕೃತಿಯನ್ನ ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಅಥವಾ ಹಿಂದಿನ ಶ್ರೇಣೀಕರಣವನ್ನ ಮರಳಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಿರುಗಿಸುವುದರ ಮೂಲಕ ತಮ್ಮ ದೇಶವನ್ನ ಮತ್ತೆ ಅಪ್ರತಿಮಗೊಳಿಸುವ ಯೋಜನೆಗಳನ್ನ ಪ್ರಾರಂಭಿಸಬೇಕು ಎನ್ನುವ ಸಂದೇಶ ಕೊಡುತ್ತಾರೆ. ಈ ಮಹತ್ವಾಕಾಂಕ್ಷೆ ಜನಪ್ರಿಯ ನಾಯಕರು ದೇಶದ ಉಜ್ವಲ ಭವಿಷ್ಯಕ್ಕಾಗಿ ಯೋಜನೆಗಳನ್ನ ರೂಪಿಸಬೇಕಾಗಿದೆ ಎಂದು ಹೇಳುತ್ತಾರೆ. ಇವರ ಪ್ರಕಾರ ದೇಶವು ಒಂದೆ, ಏಕರೂಪಿ ಸಮುದಾಯವನ್ನ ಒಳಗೊಂಡಿರಬೇಕು ಮತ್ತು ತಮ್ಮನ್ನು ಅನುಸರಿಸಿದರೆ ಮಾತ್ರ ದೇಶಕ್ಕೆ ಉತ್ತಮ ಭವಿಷ್ಯವಿದೆ ಎಂದು ಸಂದೇಶ ಕೊಡುತ್ತಾರೆ. ಈ ಮಾದರಿಯ ಮಹತ್ವಾಕಾಂಕ್ಷೆ ರಾಜಕಾರಣವು ಮೋದಿಯವರ ಆದ್ಯತೆ, ಯೋಜನೆಯಾಗಿದೆ. ಮೋದಿ ಏಕರೂಪಿ, ಒಂದೆ ಭಾರತದ ಏಳಿಗೆಗಾಗಿ ಎಲ್ಲಾ ಭಾರತೀಯರು ಒಂದಾಗಿ ಕೆಲಸ ಮಾಡಬೇಕು ಮತ್ತು ಇದು ತಮ್ಮ ಸರಕಾರದ ಏಕೈಕ ಗುರಿಯಾಗಿದೆ ಎಂದು ಪದೆ ಪದೆ ಹೇಳುತ್ತಿರುತ್ತಾರೆ'' ಎಂದು ಬರೆಯುತ್ತಾರೆ.

ಮಹತ್ವಾಕಾಂಕ್ಷೆ ರಾಜಕಾರಣಿ, ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಲ್ಲಿ ಮೇಲಿನ ಭೀತಿಗೆ ಒತ್ತು ಕೊಟ್ಟು ಅಧಿಕಾರ ಬಲಪಡಿಸಿಕೊಳ್ಳುವ ಆತಂಕಗೊಳಿಸುವ ಜನಪ್ರಿಯ ನಾಯಕರ ಅಂಶಗಳಿವೆ. ಕಳೆದ ಹನ್ನೆರಡು ವರ್ಷಗಳಲ್ಲಿ ಮೋದಿ ನೇತೃತ್ವದ ಬಿಜೆಪಿ ಸರಕಾರವು ಮುಸ್ಲಿಂ ಸಮುದಾಯವನ್ನ ಕೇಂದ್ರವಾಗಿಟ್ಟುಕೊಂಡು ಅವರಿಂದ ದೇಶದ ಭದ್ರತೆಗೆ ಧಕ್ಕೆ ಇದೆ ಎನ್ನುವ ಭೀತಿ ಸೃಷ್ಟಿಸಿ ತ್ರಿವಳಿ ವಿಚ್ಛೇದನ ಮಸೂದೆ, ಕಾನೂನುಬಾಹಿರ ಚಟುವಟಿಕೆ (ನಿಗ್ರಹ) ಮಸೂದೆಗಳಾದ ಯುಎಪಿಎ (ತಿದ್ದುಪಡಿ), ಸಿಎಎ ಮಸೂದೆಗಳಿಗೆ ತಮಗಿರುವ ದೈತ್ಯ ಸದೃಶ್ಯ ಬಹುಮತದ ಮೂಲಕ ಸಂಸತ್ತಿನಲ್ಲಿ ಅನುಮೋದನೆ ಪಡೆದುಕೊಂಡುಬಿಟ್ಟರು. ರಾಷ್ಟ್ರೀಯ ನಾಗರಿಕರ ನೋಂದಣಿ ಮಸೂದೆ (ಎನ್‌ಆರ್‌ಎ)ಯ ಮೂಲಕ ಇಲ್ಲಿನ ಮುಸ್ಲಿಮರು ಯಾವತ್ತಿಗೂ ಹೊರಗಿನವರು ಅವರಿಗೆ ಇಲ್ಲಿ ಸ್ಥಳವಿಲ್ಲ ಎನ್ನುವ ಶಾಸನವನ್ನ ಜಾರಿಗೊಳಿಸಿದರು. ಇದೆಲ್ಲವೂ ಜನಪ್ರಿಯತೆ, ಮಹತ್ವಾಕಾಂಕ್ಷೆಯ ಮುಖವಾಡದಲ್ಲಿ ಭೀತಿ ಹುಟ್ಟಿಸುವ ಕಾರ್ಯ ತಂತ್ರಗಳಾಗಿವೆ. ಆದರೆ ಆಳದಲ್ಲಿ ಆರ್‌ಎಸ್‌ಎಸ್‌ನ ಬ್ರಾಹ್ಮಣಶಾಹಿ ಕಾರ್ಯಸೂಚಿಯನ್ನು ಜಾರಿಗೊಳಿಸುವ ಅಜೆಂಡಾಗಳಾಗಿವೆ.

ಸಂವಾದಕ್ಕಾಗಿ ಈ ಯುಎಪಿಎ ಕುರಿತು ಗಮನಿಸೋಣ

ಯುಎಪಿಎ ಇತಿಹಾಸ

ಇದಕ್ಕೆ ಉದಾಹರಣೆಯಾಗಿ ಯುಎಪಿಎ ಕಾಯ್ದೆಯ (ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ) ಇತಿಹಾಸ, ಅದರ ಪರಿಣಾಮ ನಾವು ಚುನಾಯಿತ ಸರ್ವಾಧಿಕಾರ ಆಡಳಿತದ ಅಡಿಯಲ್ಲಿದ್ದೇವೆ ಎಂದು ಸಾಬೀತುಪಡಿಸುತ್ತದೆ. ಇದು ಕೆಲವು ಮುಖ್ಯ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಪ್ರಜಾಪ್ರಭುತ್ವದಲ್ಲಿ ಭಿನ್ನಮತವನ್ನು ಏಕೆ ಹತ್ತಿಕ್ಕುವ ಮನೋಭಾವದಿಂದ ಎದುರಿಸಲಾಗುತ್ತದೆ? ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯವನ್ನು, ವಿಮರ್ಶೆ, ಟೀಕೆಯನ್ನು ದಾಖಲಿಸಲು ಹಕ್ಕಿದೆ. ಆದರೆ ಮೋದಿ ನೇತೃತ್ವದ ಆಡಳಿತವು ತಮ್ಮ ಸೈದ್ಧಾಂತಿಕ ವಿರೋಧಿಗಳ ಅಭಿಪ್ರಾಯಗಳಿಂದ ತಾನು ಮತ್ತು ತನ್ನ ಪಕ್ಷ ಅಪಾಯದಲ್ಲಿದೆ ಎಂದು ಭಾವಿಸುತ್ತಾರೆ. ಅವರನ್ನು ಬಂಧಿಸಿ ವರ್ಷಗಳ ಕಾಲ ಜೈಲಿನಲ್ಲಿಡುತ್ತಾರೆ. ಇದಕ್ಕೆ ಯುಎಪಿಎ ಕಾಯ್ದೆಯ ಪ್ರಯೋಗವೇ ಒಂದು ಜ್ವಲಂತ ನಿದರ್ಶನವಾಗಿದೆ.

ಬ್ರಿಟಿಷರ ಕಾಲದ ಶಾಸನವಾದ ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ ವಸಾಹತೋತ್ತರ ಭಾರತದಲ್ಲಿಯೂ ಮುಂದುವರಿಯುತ್ತಿದೆ. ವಸಾಹತುಶಾಹಿ ಆಡಳಿತದ ವಿರುದ್ಧ ಮಾತನಾಡುವ ಯಾರೇ ಆಗಿರಲಿ ಅವರನ್ನು ಕಾರಾಗೃಹ ಶಿಕ್ಷೆಗೆ ಒಳಪಡಿಸಬಹುದು ಎನ್ನುವ ಆಗಿನ ಈ ಶಾಸನ ಮೋದಿಯವರ ಆಡಳಿತದಲ್ಲಿ ಮತ್ತಷ್ಟು ಕರಾಳತೆಯ ಸ್ವರೂಪ ಪಡೆದುಕೊಂಡಿದೆ.

ಅಮಿತ್ ಶಾ ಮತ್ತು ಮೋದಿ

ವಸಾಹತುಶಾಹಿ ಆಡಳಿತಗಾರರು ತಮ್ಮ ಆಳ್ವಿಕೆಗೆ ವಿರುದ್ಧವಾದ ಯಾವುದೇ ಚಳವಳಿಯನ್ನು ನಿಯಂತ್ರಿಸಲು ಅನೇಕ ಕಾನೂನುಗಳನ್ನು ತಂದರು. 1908ರ ಕ್ರಿಮಿನಲ್ ಲಾ ತಿದ್ದುಪಡಿ ಕಾಯ್ದೆಯಲ್ಲಿ ಮೊದಲ ಬಾರಿಗೆ ಅಕ್ರಮ ಸಂಘಟನೆ ಎಂಬ ಪದವನ್ನು ಬಳಸಿಕೊಂಡು ಭಾರತೀಯ ರಾಷ್ಟ್ರೀಯ ಚಳವಳಿಯನ್ನು ಅಪರಾಧವನ್ನಾಗಿ ಪರಿಗಣಿಸಲಾಯಿತು. ವ್ಯಂಗ್ಯವೆಂದರೆ ಸ್ವಾತಂತ್ರ್ಯಾನಂತರದ ಸರ್ಕಾರಗಳು ಇದೇ ದಬ್ಬಾಳಿಕೆಯನ್ನು ಯುಎಪಿಎ ಮುಂತಾದ ಕಾನೂನುಗಳ ಮೂಲಕ ರಾಜಕೀಯ ಭಿನ್ನಮತವನ್ನು ಹತ್ತಿಕ್ಕಲು ಬಳಸುತ್ತಿವೆ. ವಸಾಹತುಶಾಹಿಗಳು ಜಾರಿಗೆ ತಂದ ಕ್ರೂರ ಕಾನೂನುಗಳಲ್ಲಿ 1911ರ ಪ್ರಮುಖವಾಗಿತ್ತು. ಅದು ಮುಂದೆ 1971ರ (), 1980ರ (), 1985ರ () (), 2002ರ (), ಮತ್ತು ನಂತರ 1967ರ ಯುಎಪಿಎಗೆ 2004, 2008, 2012 ಹಾಗೂ 2019ರಲ್ಲಿ ಮಾಡಿದ ತಿದ್ದುಪಡಿಗಳ ರೂಪದಲ್ಲಿ ಭಾರತೀಯ ಪ್ರಜಾಪ್ರಭುತ್ವದ ಶಾಸನ ವ್ಯವಸ್ಥೆಯ ಭಾಗವಾಗಿದೆ. ಇವುಗಳೆಲ್ಲವೂ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನೆ ಮತ್ತು ಸಭೆ ನಡೆಸುವ ಮೂಲಭೂತ ಹಕ್ಕುಗಳನ್ನು ಇನ್ನಷ್ಟು ನಿರ್ಬಂಧಿಸಿವೆ.



ಯುಎಪಿಎಯ ಮೂಲ ಸ್ವರೂಪವಾಗಿದ್ದ 1919ರ ರೌಲಟ್ ಕಾಯ್ದೆ ( ) ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಮೂಲಕ ಜಾರಿಗೆ ಬಂದಿತ್ತು.

ಇಂತಹ ಶಾಸನಗಳ ಉದ್ದೇಶ, ಪರಿಣಾಮ ಮತ್ತು ಫಲಿತಾಂಶವೆಂದರೆ ''ದೇಶಕ್ಕೆ ಹಾನಿ ಉಂಟುಮಾಡುವ ನಿಜವಾದ ಭಯೋತ್ಪಾದಕ ಕೃತ್ಯಗಳನ್ನು ಮತ್ತು ಪ್ರಭುತ್ವದ ನೀತಿಗಳ ವಿರುದ್ಧ ಪ್ರತಿಭಟಿಸುವ, ಮಾತನಾಡುವ ಸಂಘಟನೆ, ವ್ಯಕ್ತಿಗಳನ್ನು ಒಂದೇ ರೀತಿಯಾಗಿ ಪರಿಗಣಿಸುವುದು. ಎರಡನ್ನೂ ರಾಷ್ಟ್ರದ ಸಾರ್ವಭೌಮತ್ವಕ್ಕೆ ಅಪಾಯ ಉಂಟುಮಾಡುತ್ತದೆ'' ಎಂದು ಒಂದೇ ತಕ್ಕಡಿಯಲ್ಲಿಟ್ಟು ಬ್ರಾಂಡ್ ಮಾಡುವುದು. ಈ ರೀತಿಯಾಗಿ, ಪ್ರಭುತ್ವವು ತನ್ನ ಸರ್ವಾಧಿಕಾರವನ್ನು ಉಳಿಸಿಕೊಳ್ಳುವ ಹೆಸರಿನಲ್ಲಿ ತನ್ನ ಆಡಳಿತ ವಿರೋಧಿ ಆಲೋಚನೆಗಳನ್ನು ಸುಲಭವಾಗಿ ಹತ್ತಿಕ್ಕುತ್ತದೆ.

ಅನುಷ್ಕಾ ಸಿಂಗ್ ತಮ್ಮ ಸೆಡೆಷನ್ ಇನ್ ಲಿಬರಲ್ ಡೆಮಾಕ್ರಟೀಸ್ ಕೃತಿಯಲ್ಲಿ ಇಂದಿನ ಉದಾರ ಪ್ರಜಾಪ್ರಭುತ್ವದಲ್ಲಿ ದೇಶದ್ರೋಹವೆಂದರೆ ಆಡಳಿತ ನಡೆಸುತ್ತಿರುವ ಸರ್ಕಾರವನ್ನು ಪ್ರತಿನಿಧಿಸುವ ಪ್ರಭುತ್ವದ ವಿರುದ್ಧ ಯುದ್ಧ ನಡೆಸುವುದು ಅಥವಾ ಅದಕ್ಕಾಗಿ ಪ್ರಯತ್ನಿಸುವುದು ಎಂದು ಹೇಳುತ್ತಾರೆ. ಮೂಲತಃ ಭಯೋತ್ಪಾದನೆ ವಿರೋಧಿ ಕಾನೂನಾಗಿ ಬಂದ ಯುಎಪಿಎ ಮೋದಿ ನೇತೃತ್ವದ ಆಡಳಿತದಲ್ಲಿ ಭಿನ್ನಮತೀಯರನ್ನು ದೇಶದ್ರೋಹಿಗಳೆಂದು ಕರೆದು ಅವರನ್ನು ಹಣಿಯುವ ಕಾನೂನಾಗಿ ರೂಪಾಂತರಗೊಂಡಿದೆ. ಅನುಷ್ಕಾ ಸಿಂಗ್ ಇದನ್ನು ದೇಶದ್ರೋಹ ಕಾನೂನು ಮತ್ತು ಯುಎಪಿಎ ನಡುವಿನ ಕಾನೂನುಬದ್ಧ ವಿವಾಹ ಎಂದು ವಿವರಿಸುತ್ತಾ ದೇಶದ್ರೋಹ ಕಾನೂನಿನ ಬಳಕೆ ಪ್ರಾರಂಭಿಕ ಹಂತದಲ್ಲಿ ಜಾಮೀನನ್ನು ತಡೆಹಿಡಿಯುತ್ತದೆ, ಏಕೆಂದರೆ ಅದಕ್ಕೆ ಸೆಷನ್ಸ್ ನ್ಯಾಯಾಲಯ ಅಥವಾ ಅದಕ್ಕಿಂತ ಮೇಲಿನ ನ್ಯಾಯಾಲಯದ ಆದೇಶ ಬೇಕಾಗುತ್ತದೆ. ಆದರೆ ಯುಎಪಿಎ ಬಳಕೆ ಹೆಚ್ಚಿನ ಪ್ರಕರಣಗಳಲ್ಲಿ ಜಾಮೀನು ಸಾಧ್ಯತೆಯನ್ನೇ ಅಳಿಸಿಬಿಡುತ್ತದೆ ಎಂದು ಹೇಳುತ್ತಾರೆ. ಒಮ್ಮೆ ಯುಎಪಿಎ ಅಡಿಯಲ್ಲಿ ಆರೋಪಿಯಾದರೆ ಜಾಮೀನು ಪಡೆದು ಹೊರಬರುವುದು ಅತ್ಯಂತ ಕಷ್ಟ.

ಈ ಕಾಯ್ದೆಯ ಸ್ವರೂಪ ಮತ್ತು ರಚನೆ ಸರ್ಕಾರಕ್ಕೆ ಅಪರಿಮಿತ ಅಧಿಕಾರ ಒದಗಿಸುತ್ತದೆ. ಇದು ಸೆಕ್ಷನ್ 43ಎ ಮತ್ತು 43ಬಿ ಮೂಲಕ ಬಂಧನ, ಶೋಧನೆ ಮತ್ತು ವಶಪಡಿಸಿಕೊಳ್ಳುವಿಕೆಯಲ್ಲಿ ಪೊಲೀಸ್ ಅಧಿಕಾರವನ್ನು ಮತ್ತಷ್ಟು ಬಲಪಡಿಸುತ್ತದೆ. ಸೆಕ್ಷನ್ 43ಡಿ(1) ಮೂಲಕ ಎಲ್ಲಾ ಅಪರಾಧಗಳನ್ನು ಆಗಿ ಮಾಡುತ್ತದೆ. ಪ್ರಕರಣದ ತನಿಖೆಗೆ ಹೆಚ್ಚಿನ ಸಮಯದ ಅವಶ್ಯಕತೆ ಇದ್ದರೆ, ನ್ಯಾಯಾಲಯದ ಅನುಮತಿಯೊಂದಿಗೆ ಚಾರ್ಜ್‌ಶೀಟ್ (ದೋಷಾರೋಪ ಪಟ್ಟಿ) ಸಲ್ಲಿಸುವ ಗಡುವನ್ನು ಹೆಚ್ಚಿಸಬಹುದು. ಈ ಸೆಕ್ಷನ್ ಪ್ರಕಾರ ನಿಗದಿತ 90 ದಿನಗಳ ಬದಲಾಗಿ 180 ದಿನಗಳವರೆಗೆ ತನಿಖೆಯನ್ನು ವಿಸ್ತರಿಸಲು ಅವಕಾಶವಿದೆ. ಸೆಕ್ಷನ್ 43ಡಿ(3) ಮೂಲಕ ಬಂಧನದ ಅವಧಿಯನ್ನು ವಿಸ್ತರಿಸುತ್ತದೆ. ನ್ಯಾಯಾಲಯದ ಅಧಿಕಾರವನ್ನು ಕುಗ್ಗಿಸುತ್ತದೆ. ಸೆಕ್ಷನ್ 43ಡಿ(4) ಮೂಲಕ ನಿರೀಕ್ಷಣಾ ಜಾಮೀನು ನಿರಾಕರಿಸುತ್ತದೆ. ಸೆಕ್ಷನ್ 43ಡಿ(5) ಮೂಲಕ ಜಾಮೀನಿನ ಮೇಲಿನ ನಿರ್ಬಂಧಗಳನ್ನು ಹೆಚ್ಚಿಸುತ್ತದೆ. ಸೆಕ್ಷನ್ 43ಇ ಮೂಲಕ ಆರೋಪಿಯ ಅಪರಾಧಿತನವನ್ನು ಊಹಿಸುತ್ತದೆ. ಸಾಮಾನ್ಯ ಅಪರಾಧಿ ಕಾನೂನಿನಲ್ಲಿ ತಪ್ಪಿತಸ್ಥರೆಂದು ಸಾಬೀತುಪಡಿಸುವವರೆಗೆ ವ್ಯಕ್ತಿ ನಿರಪರಾಧಿ ಎಂಬ ನಿಯಮವಿದ್ದರೆ ಇದರ ಅಡಿಯಲ್ಲಿ ಆರೋಪಿಯು ತಾನು ನಿರಪರಾಧಿ ಎಂದು ಸಾಬೀತುಪಡಿಸಬೇಕಾಗುತ್ತದೆ. ಸೆಕ್ಷನ್ 44ರ ಮೂಲಕ ಇನ್-ಕ್ಯಾಮೆರಾ ವಿಚಾರಣೆ ಮತ್ತು ಸಾಕ್ಷಿದಾರರ ಗುರುತನ್ನು ರಹಸ್ಯವಾಗಿಡಲು ಅವಕಾಶ ನೀಡುತ್ತದೆ. ಸೆಕ್ಷನ್ 46ರ ಮೂಲಕ ದೂರವಾಣಿ ಅಥವಾ ಇತರೆ ಸಂವಹನಗಳನ್ನು ಸಾಕ್ಷಿಯಾಗಿ ಬಳಸಲು ಅವಕಾಶ ನೀಡುತ್ತದೆ. ಮೋದಿ ಮತ್ತು ಅಮಿತ್ ಶಾ ಈ ಎಲ್ಲಾ ಸೆಕ್ಷನ್‌ಗಳನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳನ್ನು, ಸೈದ್ಧಾಂತಿಕ ವಿರೋಧಿಗಳನ್ನು ಬಂಧಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ತಳಹದಿಯನ್ನು ನಾಶ ಮಾಡುತ್ತಿದ್ದಾರೆ.

ಸೆಕ್ಷನ್ 35ನ್ನು ತಿದ್ದುಪಡಿ ಪ್ರಕಾರ: ಈ ತಿದ್ದುಪಡಿಯ ಮೊದಲು ಕೇವಲ ಸಂಘಟನೆಗಳನ್ನು ಮಾತ್ರ ಭಯೋತ್ಪಾದಕರೆಂದು ಘೋಷಿಸಬಹುದಿತ್ತು. ತಿದ್ದುಪಡಿಯ ನಂತರ, ಸರ್ಕಾರವು ನೇರವಾಗಿ ವ್ಯಕ್ತಿಗಳನ್ನು ಕೂಡ ಭಯೋತ್ಪಾದಕರೆಂದು ಪಟ್ಟಿ ಮಾಡಬಹುದು.

ಅಧಿಕಾರ: ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ, ಭಯೋತ್ಪಾದನೆಗೆ ಯೋಜನೆ ರೂಪಿಸುತ್ತಿದ್ದಾರೆ, ಪ್ರೋತ್ಸಾಹಿಸುತ್ತಿದ್ದಾರೆ ಅಥವಾ ಯಾವುದೇ ರೀತಿಯಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಸರ್ಕಾರ ನಂಬಿದರೆ, ಕೇವಲ ಶಂಕೆಯ ಆಧಾರದಲ್ಲಿ ಆ ವ್ಯಕ್ತಿಯನ್ನುಬಂಧಿಸಬಹುದು. ಈ ಸೆಕ್ಷನ್ ಅಡಿಯಲ್ಲಿ ಘೋಷಿಸಲ್ಪಟ್ಟ ವ್ಯಕ್ತಿಗಳ ಹೆಸರನ್ನು ಕಾಯಿದೆಯ 4ನೇ ಶೆಡ್ಯೂಲ್‌ನಲ್ಲಿ ಸೇರಿಸಲಾಗುತ್ತದೆ.

ಸೆಕ್ಷನ್ 43 ತಿದ್ದುಪಡಿ ಮಾಡಿ ಸೆಕ್ಷನ್ 43(5) ಸೇರಿಸಲಾಗಿದೆ. ಇದರ ಪ್ರಕಾರ: ಸಂಘಟನೆ/ವ್ಯಕ್ತಿಯ ವಿರುದ್ಧ ಸರ್ಕಾರದ ಬಳಿ ಪ್ರಾಥಮಿಕ ಸಾಕ್ಷಿ ಇದ್ದರೆ ಯುಎಪಿಎಯ ಅಧ್ಯಾಯ (ಭಯೋತ್ಪಾದನಾ ಚಟುವಟಿಕೆಗಳು) ಮತ್ತು (ಭಯೋತ್ಪಾದಕ ಸಂಘಟನೆಗಳು) ಅಡಿಯಲ್ಲಿ ಆರೋಪ ಹೊರಿಸಲಾದ ವ್ಯಕ್ತಿಗಳಿಗೆ ಜಾಮೀನು ನೀಡುವುದನ್ನು ನಿರ್ಬಂಧಿಸುತ್ತದೆ.

ಪ್ರಾಥಮಿಕ ಸಾಕ್ಷ್ಯದ ಮೌಲ್ಯಮಾಪನ: ಪ್ರಕರಣದ ಡೈರಿ ಅಥವಾ ಚಾರ್ಜ್ ಶೀಟ್ ಪರಿಶೀಲಿಸಿದಾಗ, ಆರೋಪವು ಮೇಲ್ನೋಟಕ್ಕೆ ಸತ್ಯವೆಂದು ನ್ಯಾಯಾಲಯಕ್ಕೆ ಅನಿಸಿದರೆ, ಜಾಮೀನು ನೀಡಲು ಬರುವುದಿಲ್ಲ.

ಆರೋಪಿಗೆ ಜಾಮೀನು ನೀಡುವ ಮುನ್ನ, ಜಾಮೀನು ಅರ್ಜಿಯ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ವಿಚಾರಣೆಗೆ ಅವಕಾಶ ನೀಡಬೇಕು. ಈ ತಿದ್ದುಪಡಿಯ ಪ್ರಕಾರ ಆರೋಪಿಯ ವಿರುದ್ಧದ ಪ್ರಕರಣ ಮೊದಲ ನೋಟಕ್ಕೆ ಸತ್ಯವೆಂದು ನ್ಯಾಯಾಲಯಕ್ಕೆ ತೋರುತ್ತಿದ್ದರೆ ಜಾಮೀನು ನಿರಾಕರಿಸಬೇಕು. ಈ ನಿಯಮ ಜಾಮೀನು ಪಡೆಯುವುದನ್ನು ಬಹಳ ಕಷ್ಟಮಾಡಿದೆ. ಏಕೆಂದರೆ ನ್ಯಾಯಾಲಯವು ಆರೋಪಿಯ ಅಪರಾಧಿತನವನ್ನು ಕೇವಲ ಎನ್‌ಐಎ(ರಾಷ್ಟ್ರೀಯ ತನಿಖಾ ಸಂಸ್ಥೆ) ತಯಾರಿಸಿದ ಚಾರ್ಜ್‌ಶೀಟ್ ಆಧಾರದ ಮೇಲೆ ಮಾತ್ರ ಪರಿಶೀಲಿಸಬೇಕು. ಆರೋಪಿಯು ತನ್ನ ರಕ್ಷಣೆಗೆ ಚಾರ್ಜ್‌ಶೀಟ್ ಹೊರಗಿನ ಯಾವುದೇ ಸಾಕ್ಷಿಯನ್ನು ನೀಡಲು ಅವಕಾಶವಿಲ್ಲ

ತನಿಖಾ ಅವಧಿ: ತನಿಖೆ ಪೂರ್ಣಗೊಳಿಸಲು ಮತ್ತು ಚಾರ್ಜ್ ಶೀಟ್ ಸಲ್ಲಿಸಲು ಪೊಲೀಸ್ ಅಥವಾ ತನಿಖಾ ಸಂಸ್ಥೆಗಳಿಗೆ 90 ದಿನಗಳಿಂದ 180 ದಿನಗಳವರೆಗೆ (ನ್ಯಾಯಾಲಯದ ಅನುಮತಿಯೊಂದಿಗೆ) ಸಮಯ ವಿಸ್ತರಿಸಲು ಅವಕಾಶವಿದೆ. ಆದರೆ ಈ ಕಾಯ್ದೆಯು ಸಂವಿಧಾನದ ವಿಧಿ 19, 21, 22ರ ಉಲ್ಲಂಘನೆಯಾಗಿದೆ.

ವಾಸ್ತವದಲ್ಲಿ ವ್ಯಕ್ತಿಗಳನ್ನು ಬಂಧಿಸಿದ ನಂತರ ತನಿಖಾ ಏಜೆನ್ಸಿ ಮತ್ತು ಪೋಲೀಸರು ನ್ಯಾಯಾಂಗದ ಮುಂದೆ ಅವರ ಮೇಲಿನ ಆರೋಪ ಸಾಬೀತುಪಡಿಸಬೇಕು. ಯುಎಪಿಎ ಶಾಸನದ ಪ್ರಕಾರ ಬಂಧನಕ್ಕೊಳಗಾದ ಆರೋಪಿಗಳು ತಾವು ನಿರಪರಾಧಿ ಎಂದು ಸಾಬೀತುಪಡಿಸಬೇಕು. ಇದು ಮುಖ್ಯ ಕರಾಳತೆಯಾಗಿದೆ. ಬಂಧನಕ್ಕೊಳಗಾದ ನಂತರ ಯಾವುದೇ ಆರೋಪಿಗೆ ತಾನು ನಿರಪರಾಧಿ ಎಂದು ಸಾಬೀತುಪಡಿಸುವುದು ಕಷ್ಟ. ಈ ಕಾರಣದಿಂದ ಬಂಧಿತರಿಗೆ ಜಾಮೀನು ದೊರಕುವುದು ತುಂಬಾ ದುಸ್ತರವಾಗುತ್ತದೆ.

ಸೆಕ್ಷನ್ 13ರ ಪ್ರಕಾರ: ಸರ್ಕಾರ/ತನಿಖಾ ಏಜೆನ್ಸಿ / ಪೋಲೀಸರು ಆರೋಪಿಸುವ ಕಾನೂನುಬಾಹಿರ ಚಟುವಟಿಕೆಗಳನ್ನು ಯಾವುದೆಂದು ವಿವರಿಸಿಲ್ಲ. ಅಸ್ಪಷ್ಟತೆ ಇದೆ. ಸರ್ಕಾರದ ನೀತಿ, ಸಿದ್ಧಾಂತದ ವಿರುದ್ಧ ಶಾಂತಿಯುತ ಪ್ರತಿಭಟನೆ, ವಿಮರ್ಶೆಯನ್ನು ಮೋದಿ ಆಡಳಿತವು ಕಾನೂನುಬಾಹಿರ ಎಂದು ನಿರ್ಧರಿಸಿ ಸಾವಿರಾರು ವ್ಯಕ್ತಿಗಳನ್ನು ಅಕ್ರಮವಾಗಿ ಬಂಧಿಸಿದೆ.

ದುಷ್ಪರಿಣಾಮಗಳು

2022ರ ಪಿಯುಸಿಎಲ್ ವರದಿಯ ಪ್ರಕಾರ 2015-2020ರ ಅವಧಿಯಲ್ಲಿ 8371 ವ್ಯಕ್ತಿಗಳನ್ನು ಬಂಧಿಸಲಾಗಿದೆ. 20 ಮೇ 2026ರ ಪ್ರಜಾವಾಣಿಯಲ್ಲಿನ ವರದಿಯ ಪ್ರಕಾರ 2019-2023ರ ನಾಲ್ಕು ವರ್ಷಗಳ ಅವಧಿಯಲ್ಲಿ 10,440 ವ್ಯಕ್ತಿಗಳನ್ನು ಯುಎಪಿಎ ಕಾಯ್ದೆ ಅಡಿಯಲ್ಲಿ ಬಂಧಿಸಿದ್ದಾರೆ. 335 ಆರೋಪಿಗಳಿಗೆ ಶಿಕ್ಷೆ ಪ್ರಕಟಿಸಲಾಗಿದೆ. 2019ರಲ್ಲಿ 1948(34 ವ್ಯಕ್ತಿಗಳಿಗೆ ಶಿಕ್ಷೆ), 2020ರಲ್ಲಿ 1321(80 ವ್ಯಕ್ತಿಗಳಿಗೆ ಶಿಕ್ಷೆ), 2021ರಲ್ಲಿ 1621(62 ವ್ಯಕ್ತಿಗಳಿಗೆ ಶಿಕ್ಷೆ), 2022ರಲ್ಲಿ 2636(41 ವ್ಯಕ್ತಿಗಳಿಗೆ ಶಿಕ್ಷೆ), 2023ರಲ್ಲಿ 2914(118 ವ್ಯಕ್ತಿಗಳಿಗೆ ಶಿಕ್ಷೆ) ವ್ಯಕ್ತಿಗಳನ್ನು ಬಂಧಿಸಿದ್ದಾರೆ. ಒಟ್ಟು 335 ಆರೋಪಿಗಳಿಗೆ ಶಿಕ್ಷೆ ಪ್ರಕಟಿಸಲಾಗಿದೆ. ಶಿಕ್ಷೆಯ ಪ್ರಮಾಣ ಕೇವಲ ಶೇ3.2ರಷ್ಟಿದೆ. ಶೇ.92.88ರಷ್ಟು ಪ್ರಮಾಣದ ಬಂಧಿತರು ಆರೋಪಪಟ್ಟಿ ಇಲ್ಲದೆಯೋ, ವಿಚಾರಣೆ ಮುಗಿಯದೆಯೋ ಜೈಲಿನಲ್ಲಿದ್ದಾರೆ. ಇದು ಪ್ರಜಾಪ್ರಭುತ್ವದ ಸೋಲು, ಮಾನವೀಯತೆಯ ದಮನ.

31 ಡಿಸೆಂಬರ್ 2017ರ ಭೀಮಾ ಕೋರೆಗಾಂವ್ ಗಲಭೆ ಪ್ರಕರಣದ ಆಧಾರದಲ್ಲಿ 2020-2023ರ ಅವಧಿಯಲ್ಲಿ 16 ಸಾಮಾಜಿಕ ಕಾರ್ಯಕರ್ತರು, ಚಿಂತಕರು, ನ್ಯಾಯವಾದಿಗಳನ್ನು ಯುಎಪಿಎ ಅಡಿಯಲ್ಲಿ ಬಂಧಿಸಿದರು. ಬಿಕೆ-16 ಪ್ರಕರಣ ಎಂದು ಕರೆಯಲಾಗುವ ಇದರಲ್ಲಿ ಸುಧಾ ಭಾರದ್ವಾಜ್, ಆನಂದ ತೆಲ್ತುಂಬ್ಡೆ, ಸ್ಟ್ಯಾನ್ಲಿಸ್ವಾಮಿ(ತಮ್ಮ 84ನೆ ವಯಸ್ಸಿನಲ್ಲಿ ಬಂಧನದಲ್ಲಿ ಸೂಕ್ತ ಆರೈಕೆ ಸಿಗದೆ ನಿಧನರಾದರು), ವರವರರಾವ್, ಗೊನ್ಸಾಲ್ವೆಸ್, ಅರಣ್ ಫೆರೇರಾ, ಜ್ಯೋತಿ ಜಗ್ತಾಪ್, ಶೋಮಾ ಸೇನ್, ಗೌತಮ್ ನವ್ಲಾಖಾ, ರೋನಾ ವಿಲ್ಸನ್, ಸುರೇಂದ್ರ ಗ್ಯಾಡ್ಲಿಂಗ್, ಸುಧೀರ್ ಧಾವಲೆ, ಮಹೇಶ್ ರಾವುತ್, ಹನಿಬಾಬು, ಸಾಗರ್, ಗೋರಾಖೆ, ರಮೇಶ್ ಗಾಯ್ಚಾರ್ ಅಕ್ರಮವಾಗಿ ಬಂಧಿತರಾಗಿದ್ದರು. ಸರಾಸರಿ 4-5 ವರ್ಷಗಳ ಬಂಧನದಲ್ಲಿದ್ದು ಈಗ ಜಾಮೀನು ಮೇಲೆ ಹೊರಬಂದಿದ್ದಾರೆ(ಗ್ಯಾಡ್ಲಿಂಗ್ ಅವರನ್ನು ಹೊರತುಪಡಿಸಿ). ಇವರ ಇಡೀ ಬದುಕು ನಶಿಸಿಹೋಗಿದೆ.

ಪತ್ರಕರ್ತ, ನ್ಯೂಸ್‌ಕ್ಲಿಕ್ ಸಂಪಾದಕ ಪ್ರಭೀರ್ ಪುರಕಾಯಸ್ತ ಯುಎಪಿಎ ಅಡಿ 2023ರಲ್ಲಿ ಬಂಧಿತರಾಗಿ ಏಳು ತಿಂಗಳುಗಳ ನಂತರ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ 2024ರಲ್ಲಿ ಬಿಡುಗಡೆಗೊಂಡ ಕೆಲವೇ ದಿನಗಳ ನಂತರ '' : '' ಎಂಬ ಚರ್ಚಾಸಭೆ ನಡೆಯಿತು. ಇದರಲ್ಲಿ ಭಾಗವಹಿಸಿ ಮಾತನಾಡಿದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಹಾಗೂ ಹ್ಯೂಮನ್ ರೈಟ್ಸ್ ಲಾ ನೆಟ್‌ವರ್ಕ‌ನ ಸಂಸ್ಥಾಪಕರಾದ ಕೋಲಿನ್ ಗೋನ್ಸಾಲ್ವೆಸ್ ಕಳೆದ ಹನ್ನೆರೆಡು ವರ್ಷಗಳಲ್ಲಿ ಮೋದಿ ನೇತೃತ್ವದ ಸರ್ಕಾರವು ಇದುವರೆಗೆ ನೋಡದ ರೀತಿಯಲ್ಲಿ ಭಯೋತ್ಪಾದನೆ ವಿರೋಧಿ ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡಿದೆ, ನಾವು ನಮ್ಮ ಇತಿಹಾಸದ ಅತ್ಯಂತ ಅಸ್ಥಿರ ಹಾಗೂ ಅಪಾಯಕಾರಿ ಅವಧಿಯೊಂದರಲ್ಲಿ ಬದುಕುತ್ತಿದ್ದೇವೆ ಎಂದು ಹೇಳಿದರು.

ಗೋನ್ಸಾಲ್ವೆಸ್ ಅವರು ಭಯೋತ್ಪಾದನೆ ಆರೋಪಗಳನ್ನು ಸಮರ್ಥಿಸುವ ಸಾಕ್ಷಿಗಳ ಕೊರತೆಯಿಂದ ಕೊನೆಗೆ ಬಿಡುಗಡೆಗೊಂಡ ಹಲವಾರು ಪ್ರಕರಣಗಳನ್ನು ಉಲ್ಲೇಖಿಸಿದರು: ಗೌತಮ್ ನವ್ಲಾಖಾ, ಪಿಂಜರಾ ತೋಡ್ ಸದಸ್ಯರು, ಕಿಶೋರ್ಚಂದ್ರ ವಾಂಗ್ಖೆಮ್, ವೆರ್ನನ್ ಗೋನ್ಸಾಲ್ವೆಸ್, ಜಿ.ಎನ್.ಸಾಯಿಬಾಬ ಅವರ ಜಾಮೀನುಗಳನ್ನು ಉದಾಹರಿಸಿದರು. ಅನೇಕ ಪ್ರಕರಣಗಳಲ್ಲಿ, ವಿಶೇಷವಾಗಿ ಹೋರಾಟಗಾರ ಉಮರ್ ಖಲೀದ್ ಅವರ ಪ್ರಕರಣದಲ್ಲಿ, ಆರೋಪಪಟ್ಟಿ ಅತಿಯಾಗಿದೆಯೆಂದು ಅಭಿಯೋಜಕರು ವಾದಿಸುತ್ತಾರೆ ಎಂದು ಹೇಳಿದರು.

ಹಿರಿಯ ವಕೀಲ ಸಂಜಯ್ ಪರಿಖ್ ಅವರು ಯುಎಪಿಎಯನ್ನು ಮನಬಂದಂತೆ ಪ್ರಯೋಗಿಸುವುದನ್ನು ಟೀಕಿಸುತ್ತಾ ಹಲವಾರು ಸಂದರ್ಭಗಳಲ್ಲಿ ಆರೋಪಿತರಿಗೂ ನಿಜವಾದ ಕಾನೂನುಬಾಹಿರ ಚಟುವಟಿಕೆಗಳಿಗೂ ಯಾವುದೇ ಸ್ಪಷ್ಟ ಸಂಬಂಧವಿರುವುದಿಲ್ಲ, ಯುಎಪಿಎ ಅಡಿಯಲ್ಲಿ ನಡೆಯುತ್ತಿರುವ ಈ ಅಧಿಕಾರದ ದುರುಪಯೋಗವು ವ್ಯಕ್ತಿಯ ಸಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಇದರ ಕಠಿಣ ಜಾಮೀನು ನಿಯಮಗಳು ಟಾಡಾ(()) ರೀತಿ ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಸರ್ಕಾರದ ಬದಲು ಆರೋಪಿತರ ಮೇಲೆಯೇ ಹಾಕಲಾಗಿದೆ ಎಂದು ವಾದಿಸಿದರು.

ಸುಪ್ರೀಂ ಕೋರ್ಟ್ ನ್ಯಾಯವಾದಿಗಳಾದ ಶಾಹ್ರುಕ್ ಆಲಂ ಅವರು ಅಮೆರಿಕದ ವಿದ್ಯಾರ್ಥಿ ಪ್ರತಿಭಟನೆಗಳನ್ನು ಭಾರತದ ಪ್ರತಿಭಟನೆಗಳೊಂದಿಗೆ ಹೋಲಿಸುತ್ತಾ ''ಅಮೆರಿಕದಲ್ಲಿ ಪೊಲೀಸ್ ವ್ಯವಸ್ಥೆಯನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದ್ದರೂ ಬಹುತೇಕ ಪ್ರತಿಭಟನಾಕಾರರು ಗಂಭೀರ ಆರೋಪಗಳನ್ನು ಎದುರಿಸುವುದಿಲ್ಲ, ಆದರೆ ಭಾರತದಲ್ಲಿ ಅದರ ವಿರುದ್ಧ ಪರಿಸ್ಥಿತಿ ಇದೆ. 2020ರ ದೆಹಲಿ ಗಲಭೆಗಳ ಸಂಚುಕೋರರು ಎಂಬ ಆರೋಪದಡಿ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಲ್ಪಟ್ಟ ಖಲೀದ್ ಸೈಫಿ ಮತ್ತು ಆಸಿಫ್ ಇಕ್ಬಾಲ್ ತನ್ಹಾ ಕುರಿತು ವಿವರಿಸುತ್ತಾ ಅಭಿಯೋಜಕರು, ಅವರು ಮಸೀದಿಗಳಿಗೆ ಹೋಗಿ ಇಮಾಮರೊಂದಿಗೆ ಮಾತನಾಡಿ ಅವರನ್ನು ಸಿಎಎ (()) ವಿರುದ್ಧ ಒಗ್ಗೂಡಿಸುತ್ತಿದ್ದರು, ಆದ್ದರಿಂದ ನಾವು ಅವರಿಗೆ ಜಾಮೀನು ವಿರೋಧಿಸುತ್ತಿದ್ದೇವೆ ಎಂದು ಹೇಳಿದರು. ಅದು ಅವರ ಪ್ರಜಾಸತ್ತಾತ್ಮಕ ಹಕ್ಕಲ್ಲವೇ? ಇದೇ ರೀತಿ ಉಮರ್ ಖಾಲಿದ್ ಅವರ ಪ್ರಕರಣದಲ್ಲೂ, ಈ ವ್ಯಕ್ತಿ ಮುಸ್ಲಿಮರಿಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಶಬ್ದಕೋಶವನ್ನೇ ನೀಡುತ್ತಿದ್ದಾನೆ ಎಂದು ಅಭಿಯೋಜಕರು ವಾದಿಸಿದರು. ಅದು ಹೇಗೆ ಸಮಸ್ಯೆಯಾಗಬಹುದು? ಅದು ಅವರ ಪ್ರಜಾಸತ್ತಾತ್ಮಕ ಹಕ್ಕು'' ಎಂದು ಹೇಳಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR